Is it the pleasure of the House that permission be granted to Dr. C. M. Churchihalmath for remaining absent from 25th January 1969 from the current sittings of the House ?

HON'BLE MEMBERS.—Yes.

Mr. SPEAKER.—Permission to remain absent is granted.

## MOTION OF THANKS TO THE GOVERNOR'S ADDRESS

*(Debate continued)*

Mr. SPEAKER.—Now, we will take up debate on the Motion of Thanks to the Governor's Address. Sri Venkatagiriyappa may begin his speech.

Sri K. PUTTASWAMY (Minister for Law, Labour and Parliamentary Affairs).—Sir, yesterday it was agreed that the debate on the Motion of Thanks would conclude at 2 P. M. and the Government would commence its reply at 2 P. M.

Sri S. SIVAPPA.—Sir, since we have already spent sometime for other business, and now it is nearly 1-45 P. M. I would suggest that the debate may go on till 2-45 P. M. and the Government commence their reply at 2-45 P. M. and finish by 4 P. M. or if they want they could have some more time.

Sri K. PUTTASWAMY.—Sir, I am sorry I do not want to enter into a controversy with the Hon'ble Leader of the Opposition on the floor of the House. But it is certainly not charitable on the part of the Leader of Opposition to say that the Government may finish their reply by 4 O' clock. Whenever we come to an understanding we do so, after taking into consideration the state of business before the Assembly. I would very much like the Hon. Leader of the Opposition and other hon. Members to kindly respect to that understanding, arrived at in the House.

Mr. SPEAKER.—It was of course agreed between the two sections of the House that the debate on Governor's Address should conclude at 2 O' Clock today and the Government should be given two hours time for reply. Unfortunately some time of the house has been utilised for some other business.

Sri D. B. KALMANKAR.—Sir, on a point of order.

Mr. SPEAKER.—When the Chair is speaking there can be no point of order.

Now, I think, the debate may go on till 2-45 P.M. and from 2-45 P.M. onwards the Government may take two hours for their reply.

Now, Sri Venkatagiriyappa may begin his speech.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ರಾಜ್ಯಪಾಲರ ಭಾಷಣವನ್ನು ಓದಿದಮೇಲೆ, ಈ ಮೈಸೂರು ರಾಜ್ಯದ ಎಲ್ಲಾ ಸ್ಥಿತಿಗತಿಗಳು ಕೂಡ ಬಹಳ ಚೆನ್ನಾಗಿವೆಯೆಂದು ಹೇಳಿರುವುದು ತಿಳಿದುಬಂತು. ಆಹಾರ ಪರಿಸ್ಥಿತಿಯಲ್ಲಿ ಆಗಲೀ ಕಾನೂನಿನ ಪರಿಸ್ಥಿತಿಯಲ್ಲಿ ಆಗಲೀ ಇತರ ಎಲ್ಲಾ ವಿಷಯಗಳಲ್ಲಿಯೂ ಕೂಡ ಮೈಸೂರು ರಾಜ್ಯ ಬಹಳ ಚೆನ್ನಾಗಿದೆ ಎನ್ನುವ ಧಾಟಿಯಲ್ಲಿ ಮಾನ್ಯ ರಾಜ್ಯಪಾಲರು ಈ ಸಭೆಯ ಮುಂದೆ ತಿಳಿಸಿದ್ದಾರೆ. ಈ ರಾಜ್ಯದಲ್ಲಿ ನಡೆದಿರುವ ವಾಸ್ತವಾಂಶಗಳನ್ನು ರಾಜ್ಯಪಾಲರು ತಮ್ಮ ಭಾಷದಲ್ಲಿ ಹೇಳಿದ್ದಾರೆ.

[MR. DEPUTY SPEAKER in the Chair].

ಈ ಹೊಸ ಮಂತ್ರಿಮಂಡಲ ಬಂದಮೇಲೆ ತಾಲ್ಲೂಕ್‌ಬೋರ್ಡ್ ಚುನಾವಣೆಯನ್ನು ನಡೆಸಿರುವ ಬಗ್ಗೆ ರಾಜ್ಯಪಾಲರು ತಮ್ಮ ಭಾಷದಲ್ಲಿ ಒಂದು ಮಹತ್ವವಾದ ಘಟನೆ ಎಂದು ತಿಳಿಸಿದ್ದಾರೆ. ಈ ಅತ್ಯಂತ ಮಹತ್ವಪೂರ್ಣವಾದ ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಯಾವ ರೀತಿಯಲ್ಲಿ ಅಧಿಕಾರದಲ್ಲಿ ರತಕ್ಕಂಥ ಕಾಂಗ್ರೆಸ್ ಪಕ್ಷದವರು ನಡೆಸಿದವರು ಎಂಬುದು ಬಹಳ ಮುಖ್ಯವಾದ ವಿಷಯ. ನಿಷ್ಪಕ್ಷಪಾತವಾಗಿ ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಈ ಸರ್ಕಾರದವರು ನಡೆಸಿ ಗೆದ್ದಿಲ್ಲ. ತಾಲ್ಲೂಕ್‌ಬೋರ್ಡ್‌ಗಳ ಆಡಳಿತವನ್ನು ತಾವೇ ತೆಗೆದುಕೊಳ್ಳುವುದಕ್ಕೆ ಏನು ಮಾಡುವುದಕ್ಕೂ ತಯಾರಾಗಿದ್ದರು. ಯಾರು ಪ್ರಜಾಪ್ರಭುತ್ವದ ಪರಂಪರೆಯನ್ನು ಸರಿಯಾಗಿ ನಡೆಸಿಕೊಂಡು ಬರಬೇಕೋ ಅಂತಹವರೇ ಈ ದಿನ ಗೂಂಡಾವರ್ತಿಗಳಂತೆ ಈ ಚುನಾವಣೆಯಲ್ಲಿ ಹೊನ್ನಿನ ಸುರಿ ಮಳೆಯನ್ನೇ ಸುರಿಸಿದ್ದಾರೆ. ಜನರಲ್ ಎಲಕ್ಷನ್ ಸಹ ಈ ರೀತಿ ನಡೆಯಲಿಲ್ಲ. ಆ ಒಂದು ರೀತಿಯಲ್ಲಿ ನಡೆಸಿ ಈ ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಗೆದ್ದಿದ್ದಾರೆ ಕ್ಷಾಮ ಪರಿಹಾರಕ್ಕೋಸ್ಕರವಾಗಿ ಸರ್ಕಾರದವರು ಕೊಟ್ಟಂತಹ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷದವರು ಖರ್ಚುಮಾಡಿದ್ದಾರೆ. ಕೋಲಾರ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಸರ್ಕಾರ ಆ ಜಿಲ್ಲೆಯ ಕ್ಷಾಮ ಪರಿಹಾರದ ಕೆಲಸಕ್ಕೆ ಮೇಲ್ವಿಚಾರಣೆ ನೋಡಿಕೊಳ್ಳಲು ಈ ರಾಜ್ಯದ ರಾಜ್ಯಾಂಚಿನರಾದ ಶ್ರೀ ಲಿಂಗಾರತ್ತಿಯವರಿಗೆ ಒಪ್ಪಿಸಿತ್ತು. ಆ ರೀತಿ ಒಪ್ಪಿಸಿದ ದಿನದಿಂದ ಇಂದಿನವರೆಗೂ ಕೂಡ ಅವರು ಸರ್ಕಾರದವರು ಕ್ಷಾಮಪರಿಹಾರಕ್ಕಾಗಿ ಕೊಟ್ಟಿದ್ದ ಹಣವನ್ನು ತಾಲ್ಲೂಕ್‌ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್‌ಪಕ್ಷದವರು ಅಧಿಕಾರ ಗಳಿಸಿಕೊಳ್ಳುವುದಕ್ಕೆ ಉಪಯೋಗಿಸುವುದರಲ್ಲಿ ಆಸಕ್ತರಾಗಿದ್ದರು. ಈ ಹಣದಿಂದ ನಿಜವಾಗಿಯೂ ಬಡವರಿಗೆ ಅನುಕೂಲವಾಗಲಿಲ್ಲ. ಮಾಲೂರು ತಾಲ್ಲೂಕ್‌ನಲ್ಲಿ ಚುನಾವಣೆಯಲ್ಲಿ ಗೆಲ್ಲಬೇಕೆಂದು ಮೂರು ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಪ್ರಾರಂಭ ಮಾಡಿದರು. ಇಲ್ಲಿ ಕಾಂಗ್ರೆಸ್ಸು ಪಕ್ಷದವರು ತಮ್ಮ ಪಕ್ಷ ಗೆಲ್ಲುವುದಕ್ಕೆ ಸಾಧ್ಯವಿಲ್ಲ ಎಂದು ಯಾವಾಗ ಅವರಿಗೆ ಮನವರಿಕೆಯಾಯಿತೋ ಅದಕ್ಕೆ ನಮ್ಮ ಸರಕಾರದ ಮಂತ್ರಿಗಳಾದ ಶ್ರೀ ಲಿಂಗಾರೆಡ್ಡಿಯವರು ಇದಕ್ಕೆ ಏನೇನು ಮಾಡಬೇಕೋ ಅವನ್ನೆಲ್ಲಾ ಮಾಡಬೇಕು ಎಂದು ಒಂದು ರೀತಿಯಾದ ಆದೇಶ ಕೊಟ್ಟು ಮತ್ತು ಇಲ್ಲಿ ಕ್ಷಾಮ ಪರಿಹಾರಕ್ಕಾಗಿ ಕೊಟ್ಟ ಹಣವನ್ನೆಲ್ಲಾ ತಮಗೆ ಬೇಕಾದವರಿಗೆ ಕೆರೆ ಕಟ್ಟಿ ಕಟ್ಟಿಕೊಳ್ಳುವುದಕ್ಕಾಗಿ ಸಹಾಯ ಮಾಡುತ್ತೇವೆ ಎಂದು ಹೇಳಿ ಬಂದಿದ್ದಾರೆ ಮತ್ತು ಇಲ್ಲಿ ಇದುವರೆಗೆ ಆ ಜನಕ್ಕೆ ಹಣವನ್ನು ಕೊಟ್ಟಿಲ್ಲ. ಇದನ್ನು ರೆವೆನ್ಯೂ ಮಂತ್ರಿಗಳ ಮೂಲಕ ಕೊಡಿಸುವ ಪ್ರಯತ್ನದಲ್ಲಿದ್ದಾರೆ. ಇವರು ಸರಕಾರದ ಹಣವನ್ನು ಸ್ವಂತ ಮನೆಯ ಆಸ್ತಿಯಂತೆ ಖರ್ಚು ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಗೆ ಎಷ್ಟು ಹಣವನ್ನು ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಕೊಟ್ಟಿದ್ದಾರೋ ಅದನ್ನು ಇಲ್ಲಿನ ಡೆಪ್ಯುಟಿ ಕಮಿಷನರವರ ಮೂಲಕ ಕೊಟ್ಟಿರುತ್ತಾರೆ. ಇವರು ಬೇರೆ ಬೇರೆ ತಾಲ್ಲೂಕುಗಳಿಗೆ ಇಷ್ಟು ಹಣ ಎಂದು ಹಂಚುತ್ತಾರೆ. ಆದರೆ ಇಲ್ಲಿ ಆ ರೀತಿ ಮಾಡಲು ಅವಕಾಶ ಕೊಡದೆ ಮಾಲೂರಿಗೆ ಮಾನ್ಯ ಮಂತ್ರಿಗಳಾದ ಶ್ರೀ ಲಿಂಗಾರೆಡ್ಡಿಯವರು ಸ್ವತಃ ಬಂದು ಇಲ್ಲಿ ಚುನಾವಣೆಗಳಾಗುವವರೆಗೆ ಇದ್ದು ಇಲ್ಲಿ ಸುಮಾರು ಮೂರು ಲಕ್ಷ ರೂಪಾಯಿಗಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಇದಕ್ಕೆ ಹಣವನ್ನು ಈಚೆಗೆ ಕೊಡಿಸುವ ಪ್ರಯತ್ನ ಕೂಡ ಮಾಡಿದ್ದಾರೆ. ಈ ಮಂತ್ರಿಗಳ ಸ್ಥಾನಮಾನವೇನು ಎನ್ನುವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಸರಕಾರದ ಬೊಕ್ಕಸದಿಂದ ಈ ರೀತಿ ಹಣವನ್ನು ಚುನಾವಣೆಗಳಿಗಾಗಿ ಖರ್ಚು ಮಾಡುವುದು ಸರಿಯೇ ಎಂದು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಇಷ್ಟೆಲ್ಲಾ ಖರ್ಚು ಮಾಡಿ ಇಂದು ತಾಲ್ಲೂಕು ಬೋರ್ಡುಗಳ ಚುನಾವಣೆಗಳಲ್ಲಿ ನಾವು ಗೆದ್ದು ಬಂದಿದ್ದೇವೆ ಎಂದು ಹೇಳುತ್ತಾರೆ. ಇವರು ಮಾಡಿರುವ ಒಂದೊಂದು ಕೆಲಸಗಳನ್ನೂ ನೋಡಿದರೆ ಇವರನ್ನು ಯಾರೂ ಕೇಳುವರೇ ಇಲ್ಲ. ಬಾಗೇಪಲ್ಲಿ ತಾಲ್ಲೂಕಿನ ಒಂದು ಕ್ಷೇತ್ರದಲ್ಲಿ ಅಧ್ಯಕ್ಷರ ಚುನಾವಣೆಯಾಗಬೇಕಾಗಿತ್ತು. ಇಲ್ಲಿಗೆ ಶಂಕರರೆಡ್ಡಿ ಎನ್ನುವವರು ಅಧ್ಯಕ್ಷರಾಗಿ ಚುನಾವಣೆಯಾಗಬೇಕಾಗಿತ್ತು. ಇವರು ಆಡಳಿತ ಪಕ್ಷದವರಲ್ಲ ಎಂದು

ಇವರಿಗೆ ಇಲ್ಲದ ತೊಂದರೆಗಳನ್ನು ಮಾಡುವುದಕ್ಕಾಗಿ ಇಲ್ಲದ್ದ ಸೇತುವೆಗಳನ್ನು ,ಕಾಂಗ್ರೆಸ್ಸಿ ಮುಖಂಡರು ಪೋಲೀಸಿನವರ ಜೆಂಬಲದಿಂದ ಓಡಿಸಿ ಹಾಕಿಸಿ ಇಲ್ಲದ ಕಿರುಕುಳಗಳನ್ನು ಕೊಡುತ್ತಿದ್ದಾರೆ. ಈ ದಿವಸ ನಮ್ಮಲ್ಲಿ ಅಧಿಕಾರ ಇದೆ ಎಂದು ತಮಗೆ ಬೇಕಾದ ಹಾಗೆ ಕೆಲಸಗಳನ್ನು ಮಾಡಬಹುದು ಎಂದು ಇಲ್ಲಿಗೆ ಕ್ಷಾಮ ಪರಿಹಾರಕ್ಕೆಂದು ಕೊಟ್ಟ ಹಣವನ್ನು ಇಲ್ಲಿ ನಡೆಯುವ ತಾಲ್ಲೂಕು ಬೋರ್ಡುಗಳ ಚುನಾವಣೆಗಳಿಗಾಗಿ ಉಪಯೋಗಿಸಿದ್ದಾರೆ. ಈ ರೀತಿ ಅನ್ಯಾಯ ಮಾಡಿ ದೇಶದ ಹಣವನ್ನು ಹಾಳುಮಾಡುತ್ತಿದ್ದರೆ ದೇಶದ ಪ್ರಜಾ ಪ್ರಭುತ್ವ ಉಳಿದೀತೇ ! ಇಂತಹ ಅಕ್ರಮ ನೀತಿಗಳಿಂದ ತಾಲ್ಲೂಕು ಬೋರ್ಡು ಚುನಾವಣೆಗಳಲ್ಲಿ ನಾವು ಹೆಚ್ಚು ಸಂಖ್ಯೆ ಯಲ್ಲಿ ಬಂದಿದ್ದೇವೆ ಎಂದು ಹೇಳುತ್ತಿದ್ದಾರೆ. ಕೇವಲ 31 ಕಡೆಗಳಲ್ಲಿ ಮಾತ್ರ ವಿರೋಧ ಪಕ್ಷದವರು ಚುನಾವಣೆಗಳಲ್ಲಿ ಬಂದಿದ್ದಾರೆ ಇತರ ಕಡೆಗಳಲ್ಲಿ ಕಾಂಗ್ರೆಸ್ಸಿನವರೇ ಬಂದಿದ್ದಾರೆ ಎಂದು ಹೇಳಿದರು. ಇಲ್ಲಿ ಹೇಗೆ ಬಂದಿದ್ದಾರೆ ಎನ್ನುವುದು ಎಲ್ಲರಿಗೂ ಈಗ ಗೊತ್ತಾಗಿದೆ. ಇವೊತ್ತು ಮಹಾತ್ಮ ಗಾಂಧೀಜಿಯವರು ಏನಾದರೂ ಬದುಕಿದ್ದರೆ ಮತ್ತು ಅವರು ಇಂತಹ ಕಾಂಗ್ರೆಸ್ಸು ಪಕ್ಷದವರೂ ನಡೆಸಿದ ತಾಲ್ಲೂಕು ಬೋರ್ಡುಗಳ ಚುನಾವಣೆಗಳನ್ನು ನೋಡಿದ್ದಿದ್ದರೆ ಮತ್ತು ಹೀಗೆ 30-40 ಸಾವಿರದಷ್ಟು ಚರ್ಚು ಮಾಡಿರುವುದನ್ನು ನೋಡಿದ್ದರೆ ಖಂಡಿತ ಅವರು ತುಂಬ ದುಃಖ ಪಡುತ್ತಿದ್ದರು. ಈ ರೀತಿ ಹೇರಳವಾಗಿ ದುಡ್ಡು ಖರ್ಚು ಮಾಡಿ ಕಾಂಗ್ರೆಸ್ಸು ಪಕ್ಷ ಚುನಾವಣೆಯಲ್ಲಿ ಗೆದ್ದರೆ ಅದು ಖಂಡಿತ ನ್ಯಾಯವಾದ ಮಾರ್ಗವಲ್ಲ. ಹೀಗಾದರೆ ಜನರು ತಮ್ಮ ಹಕ್ಕುಭಾಧ್ಯತೆ ಗಳನ್ನು ಕಾಪಾಡಿ ಕೊಳ್ಳುವುದೇ ಕಷ್ಟ ವಾಗುತ್ತದೆ. ಇನ್ನು ಮುಂದೆ ವಿರೋಧ ಪಕ್ಷದವರು ಚುನಾವಣೆಗಳಲ್ಲಿ ನಿಂತು ಗೆಲ್ಲಬೇಕಾದರೆ ಸಶಸ್ತ್ರರಾಗಿ ನಕ್ಸಲ್‌ಬಾರಿಯಂತೆ ಚುನಾವಣೆಗಳನ್ನು ಎದುರಿಸಬೇಕಾಗಿ ಬರಬಹುದು. ಈ ರೀತಿಯಾಗಿ ಆಡಳಿತ ಪಕ್ಷದವರು ಮುಂದುವರಿಯುವುದಾದರೆ ಖಂಡಿತ ಇವರು ಮುಂದುವರಿಯಲಾರರು. ನಮ್ಮ ಕ್ಷೇತ್ರದವರಾದ ಶ್ರೀಮಾನ್ ಲಂಗಾರೆಡ್ಡಿ ಯವರೇ ಸ್ವತಃ ಬಂದು ಇಂತಹ ಚುನಾವಣೆಗಳಲ್ಲಿ ಭಾಗವಹಿಸಿ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದಾರೆ. ಇಲ್ಲಿಗೆ ಮೈನರು ಇರಿಗೇಷನ್‌ಗಾಗಿ ಕೊಟ್ಟ ಹಣವನ್ನು ಹೊಸ ಕೆರೆಗಳನ್ನು ಕಟ್ಟಲು ಕೆಲವರಿಗೆ 70-80 ಸಾವಿರದಷ್ಟು ಹಣ ಕೊಟ್ಟಿದ್ದಾರೆ. ಮತ್ತು ಜನಕ್ಕೆ ಬಹಳ ಅನ್ಯಾಯ ಮಾಡಿದ್ದಾರೆ ಇಲ್ಲಿಗೆ ಕ್ಷಾಮ ಪರಿಹಾರಕ್ಕಾಗಿ ಕೊಟ್ಟ ಹಣದಲ್ಲಿ ಅರ್ಧದಷ್ಟನ್ನು ಚುನಾವಣೆಗಳಿಗಾಗಿ ಖರ್ಚು ಮಾಡಿದ್ದಾರೆ. ಇದರ ಬಗ್ಗೆ ಸರಕಾರ ಕೂಡಲೇ ವಿಚಾರಣೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಈ ದಿವಸ ಸರ್ಕಾರದವರು ಮಾತೆತ್ತಿದರೆ ಬೆಲೆಗಳೆಲ್ಲಾ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಬೆಲೆಗಳೆಲ್ಲಾ ಏರುತ್ತಾ ಇವೆ. ನಿರುದ್ಯೋಗವೂ ಬೆಳೆಯುತ್ತಾ ಇದೆ. ಈ ಪರಿಸ್ಥಿತಿ ಇರುವಾಗ ಜನಗಳು ಒಂದಕ್ಕೆರಡರಷ್ಟು ಕೊಟ್ಟು ಕೊಂಡುಕೊಳ್ಳಲು ಸಾಧ್ಯವೇ ? ಇಷ್ಟರವರೆಗೂ ಕಾದರೂ ಒಳ್ಳೆಯ ಸ್ಥಿತಿ ಬರಲಿಲ್ಲ. ಜನತೆಯು ಒಳ್ಳೆಯ ಜೀವನ ಮಾಡುವುದಕ್ಕಾಗು ವುದಿಲ್ಲ. ಕೇಂದ್ರ ಸರ್ಕಾರದವರು ಒಂದು ತಪ್ಪು ನೀತಿಯನ್ನು ಅನುಸರಿಸಿದ್ದಾರೆ. ಆಹಾರ ಧಾನ್ಯಗಳ ವ್ಯಾಪಾರವಾಗಲಿ, ಬ್ಯಾಂಕುಗಳ ರಾಷ್ಟ್ರೀಕರಣವಾಗಲಿ ಮಾಡುವುದನ್ನು ಬಂಡವಾಳಶಾಹಿಗಳ ಧೋರಣೆ ರೀತಿ ಅನುಸರಿಸುತ್ತಿದ್ದಾರೆ. ಇವೆಲ್ಲಾ ರಾಷ್ಟ್ರೀಕರಣವಾಗಲು ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸಿ. ಆದುದರಿಂದ ಕೇರಳ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಯಾವ ಧಾಟಿಯಲ್ಲಿ ಇದ್ದಾರೋ ಅದೇ ಧಾಟಿಯಲ್ಲಿ ನಮ್ಮ ರಾಜ್ಯ ಸರ್ಕಾರ ದವರು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಅನುಮಾನ ಬರುತ್ತದೆ. ಸಮತಾವಾದಿ ಸಮಾಜದ ಧೋರಣೆಯನ್ನು ಅನುಷ್ಠಾನಕ್ಕೆ ತರಬೇಕು. ಹಾಗಾದರೆ ನಿರುದ್ಯೋಗವನ್ನು ಹಿಡಿತದಲ್ಲಿ ಇಡಲು ಅನುಕೂಲವಾಗುತ್ತದೆ. ಇದಕ್ಕೆ ನಮ್ಮ ರಾಜ್ಯ ಸರ್ಕಾರ ದವರು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಇನ್ನು ಭೂಸುಧಾರಣೆ ವಿಷಯ ಹೇಳುವುದಾದರೆ ಇದರಲ್ಲಿ ಅನಾವಶ್ಯಕವಾದ ಕಾಲ ವಿಳಂಬವಾಗುತ್ತಾ ಇದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಕೂಡ ಉಳುವವನಿಗೆ ಹೊಲ. ಅದಕ್ಕೋಸ್ಕರ ನಾವು ಬದುಕಿರುವುದು ಎಂದು ಕಾಂಗ್ರೆಸ್ಸಿನವರು ಹೇಳುತ್ತಾ ಇದ್ದರು. ಆದರೆ ಈ ಕಾರ್ಯ ನಿಧಾನವಾಗುತ್ತಾ ಇದೆ. ಇದಕ್ಕೆ ಪಂಚಾಯಿತಿ ಸಹಕಾರ ಬೇಕು ಎಂದು ಹೇಳು ತ್ತಾರೆ. ರಾಜ್ಯ ಸರಕಾರದ ಉದ್ದೇಶ ಏನು ಇದೆಯೋ ಗೊತ್ತಾಗುವುದಿಲ್ಲ. ಪಂಚಾಯಿತಿಯಲ್ಲಿ ದೊಡ್ಡ ದೊಡ್ಡ ಶ್ರೀಮಂತರಿದ್ದಾರೆ. ಭೂಸುಧಾರಣಾ ಕ್ರಮವನ್ನು ಜಾರಿಗೆ ತರುವ ಕೆಲಸ ಅವರಿಗೆ ಕೊಟ್ಟರೆ ಅವರು ತಮ್ಮ ಭದ್ರತೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಮಹಾತ್ಮಾ ಗಂಧೀಜಿಯವರು ಸವರ್ಣ ಹಿಂದುಗಳಿಗೆ ದೇಶದ ಅಧಿಕಾರವನ್ನು ಕೊಟ್ಟು ಹರಿಜನರಿಗೆ ಒಳ್ಳೆಯದು ಮಾಡಬೇಕೆಂದು ಹೇಳುತ್ತಾ ಇದ್ದರು. ಇಂದಿಗೆ 20 ವರ್ಷಗಳಾದರೂ, ಇನ್ನೂ ಹರಿಜನರಿಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ದೇವಸ್ಥಾನಗಳಿಗೆ ಪ್ರವೇಶ ಸಿಕ್ಕುತ್ತಾ ಇಲ್ಲ. ಭೂಸುಧಾರಣೆ ಮಾಡುತ್ತೇವೆಂದು ಹೊರಟ್ಟಿದ್ದೀರಿ, ಆದರೆ ಸಾಮಾನ್ಯ ರೈತನಿಗೆ ಏನೂ ಸಹಾಯ ಸಿಗುತ್ತಾ ಇಲ್ಲ. ಆದುದರಿಂದ ವ್ಯವಸಾಯ ಅಭಿವೃದ್ಧಿ ಮಾಡಲು, ರೈತವರ್ಗದವರಿಗೆ ಸಹಾಯಮಾಡಲು ಕೂಡಲೇ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸಬಯಸುತ್ತೇನೆ.

ಇನ್ನು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಕೋಲಾರ, ಬಿಜಾಪುರ ಇಂಥ ಕಡೆಗಳಲ್ಲಿ ಯಾವುದಾದರೂ ಮೇಜರ್ ಅಥವಾ ಮೈನರ್ ಇರ್ರಿಗೇಷನ್ ಪ್ರಾಜೆಕ್ಟ್ ಆಗಲಿ ಮಾಡುವುದಕ್ಕೆ ಅವಕಾಶವಿಲ್ಲ. ಇಷ್ಟೊಂದು ಹಣವನ್ನು ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡುತ್ತಾ ಇರುವಾಗ ಕೋಲಾರ ಜಿಲ್ಲೆಯಲ್ಲಿ ಬಾವಿಗಳಿಗೂ ಹೆಚ್ಚು ಹಣ ಕೊಡದೆ ಇದ್ದೀರಿ. ಮತ್ತು ಯಾವ ಬ್ಯಾಂಕ್‌ನವರು 100 ಕ್ಕೆ 90 ಭಾಗ ವಸೂಲ್ ಮಾಡುವುದಿಲ್ಲವೋ ಅವರಿಗೆ ಪುನಃ ಸಾಲ ಕೊಡುವುದಕ್ಕಾಗುವುದಿಲ್ಲ ಎಂದು ಕಟ್ಟುನಿಟ್ಟಾಗಿ ಒಂದು ತೀರ್ಮಾನ ಮಾಡಿಕೊಂಡಿದ್ದೀರಿ.

2–00 P.M.

ಇದರಿಂದ ಸುಮಾರು ಮೈಸೂರು ರಾಜ್ಯದ ಅರ್ಧ ತಾಲ್ಲೂಕುಗಳಿಗೆ ಯಾವ ಹಣವೂ ಸಿಕ್ಕುವುದಕ್ಕೆ ಅವಕಾಶವಿಲ್ಲ. ಒಂದು ವರ್ಷದಲ್ಲಿ ಒಂದು ತಾಲ್ಲೂಕಿನಲ್ಲಿ ಯಾರಾದರೂ 200 ಜನ ಸಾಲ ತೆಗೆದುಕೊಂಡಿದ್ದು, ಅದನ್ನು ಯಾವ ಯಾವ ಬಾಬುಗಳಿಗೋ ಖರ್ಚು ಮಾಡಿದ್ದು, ಅದನ್ನು ವಾಪಸು ಕೊಡದೆ ಇದ್ದರೆ, ಅಂಥವರಿಂದ ಬರಬೇಕಾದ ಬಾಕಿಯನ್ನು ವಸೂಲ್ಮಾಡಿಕೊಳ್ಳಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಹಕಾರ ಇಲಾಖೆ ಇದೆ, ಅವರು ಕ್ರಮ ತೆಗೆದುಕೊಂಡು ಬಾಕಿ ಇರುವವರ ಜಮೀನನ್ನು ಹರಾಜು ಮಾಡಬಹುದು. ಹಾಗೆ ಮಾಡದೆ 200 ಜನ ಸಾಲ ತೆಗೆದುಕೊಂಡಿದ್ದು ಅವರಲ್ಲಿ ಕೆಲವರು ವಾಪಸು ಕೊಟ್ಟಿಲ್ಲವೆಂಬ ಕಾರಣದ ಮೇಲೆ ಆ ತಾಲ್ಲೂಕಿನಲ್ಲಿ ಯಾರಿಗೂ ಸಾಲ ಕೊಡುವುದಿಲ್ಲ ಎನ್ನುವುದು ನ್ಯಾಯವಾದುದಲ್ಲ. ಅದೂ ಅಲ್ಲದೆ ಒಂದೇ ವರ್ಷ ಎಲ್ಲ ಬಾಕಿಯನ್ನೂ ವಸೂಲ್ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕನಿಷ್ಟಪಕ್ಷ 50 ಭಾಗ ಹಣ ವಸೂಲು ಮಾಡಿದ್ದರೆ ಅಂಥ ಬ್ಯಾಂಕುಗಳಿಗೆ ಖಂಡಿತವಾಗಿಯೂ ಪುನಃ ಸಾಲ ಕೊಡುವುದಕ್ಕೆ ಸರ್ಕಾರದವರು ಏರ್ಪಾಟು ಮಾಡಬೇಕು. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri N. B. SIRDESAI (Khanapur).—Mr. Speaker, Sir, I rise to oppose and make certain observations on the address delivered by the Governor. While placing an account of some of the outstanding events in the State, he has referred to the Taluk Board elections and stated that the Taluk Board elections were one of the most important events and the elections went off in an orderly and peacefull manner. Further he has stated that the Government is continuously alive to the problem of strengthening Panchayat Raj institutions to enable them to serve rural communities in an effective manner. While saying this he has shrewdly avoided to tell us whether his Government is going to introduce Zilla Parishads in the State. When the Taluk Board elections were conducted the Congress party, that is, the ruling party followed some corrupt practices. I can quote many examples of the corrupt practices followed by the ruling party. But, for the information of this House I can quote only one intance from my constituency. There is a village by name Nilavadi which is the headquarters of grama panchayat. There, one of the polling officers got the polling box in one room and asked the polling agent of the M. E. S. party to sit outside. The polling box was not visible. The polling officer followed corrupt practice and induced the voters to put stamp on the symbol of Congress Party candidate and

he himself put stamp on that symbol and thus they secured 250 votes fraudulently. When I came to know of it, I went to the place and I enquired with the Presiding Officer. The Presiding officer stated that as an M. L. A. he would not respect me but as a leading gentleman of taluk he would respect me. I pointed out the rules under which an officer following corrupt practices could be punished with fine and imprisonment. Then he kept quiet and apologised to me and I came back. Like that the Congress Party has spent a lot of money. They have supplied liquor bottles and given false promises and assurances to the voters. But they were all of no avail. They could not secure majority in the taluk board. The M. E. S. party got majority in spite of such mean efforts. This Government believes that India is a republic and democratic country. Then. why should this Government not adopt the decentralisation policy ? Under the garb of decentralisation the Government is centralising powers. They have delegated wide powers to the officers and the panchayat institutions at present have to depend on the officials for administration and technical sanctions. How can they serve the rural community in a better way ? If this Government is not going to decentralise powers, then how is it possible to strengthen the panchayat institutions ? The other States in India are making headway in decentralisation of powers, so I fail to understand why this State alone is lagging behind in decentralisation of powers. Gandhiji had dreamt of Gram Raj, i. e., village republic. But this Government instead of forming gramaraj and instead of delegating more powers to the panchayat institutions, they are delegating more powers to their officers and thereby they are curtailing the rights of citizens.

With reference to the boundry dispute, the Governor has stated that Mahajan Commission gave the report after thorough enquiry and that the Mysore legislature has resolved to urge the India Government to implement recommendations of the report in toto. But he has forgotton to note that the members of the M. E. S. party who represent mojority of the people of that area have not voted for the resolution. They have never supported the resolution. This Government believes that India is a Republic. Then why should it pass a resolution against the wishes of the majority of the people ? In a democratic set up the wishes of the people must be respected and no Government can pass any resolution against the wishes of the majority of the people. The attitude of this Government is undemocratic and unjust in urging the Central Government to implement the Mahajan Commission report. I remember one of the members on the other side tried to condemn the Maharashtra Government by saying that the attitude of that Government was like that of Viswamitra a great sage in olden days who had an illegitimate child from a fairy and who at the time of confirmation denied that the child was his own, like that Maharashtra Government is denying the recommendations made by Mahajan though it had consented to the appointment of the boundary commission. There is vast difference between consenting to the appointment of the commission and acceptance

(SRI N. B. SIRDESAI)

of its recommendations. Mr. Mahajan himself had stated that he was to submit the recommendations and the Government of India was to give a final decision. Now also it is upto the Government of India to give a final decision. So it is no use in condemning the Government of Maharashtra. Neither the Maharashtra Government nor the State of Mysore have got any right to pass any resolution against the wishes of the people. The Maharashtra Government had also consented to the appointment of the Commission against the wishes of the people in the border area. The people of the border area have not consented to the appointment of the Boundry Commission.

We agree that Mahatmaji lived and gave up his life for the establishment of a social order in which there will be equality of status and opportunity for all citizens in India irrespective of caste, creed or religion. Now may I ask whether this Government is following the high ideals of Gandhiji, which are enshrined in the Constitution of India? While giving Government jobs and extending Government concessions, those ideals are not followed by this Government and caste, creed, community and religion are taken into consideration by this Government. I fail to understand how this Government can celebrate the Centenary of Mahatmaji in a fitting manner and how the soul of the departed Father of the Nation would be pleased and satisfied and with what face the Centenary would be celebrated by this Government?

The Governor has admitted that the seasonal conditions were bad in 1968 and for the fourth year in succession. He has also admitted that failure of rains in July and August had brought in severe agricultural distress in 136 Taluks comprising of 16,000 villages. During the last Session I had brought to the notice of this hon. House and to the notice of this Government that my Taluk was equally affected by these seassonal conditions because of the failure of rains and hence the same scarcity relief works should be undertaken in my Taluk also. In spite of my request and on the contrary, this year the officials of this Government are recovering levy by force and no exemption from levy is being granted to the people of my Taluk though the lands in my Taluk are rainfed and of low productivity. Justice is being done to the Kannadiga people and injustice is being done to the Marathi people: that is the attituded of this Government.

As regards implementation of Mysore Land Revenue Reforms Act, the Governor has stated that it is in progress. The Government has established the occupancy rights to the tenants in respect of lands belonging to the landlords. But what about lands belonging to the Revenue Department? While establishing rights over these Revenue lands, they are recovering T. T. fine from the tenants who are in possession of those lands since 1956 for the last ten to twelve years. Those tenants have been regularly paying land revenue and rent to the

Government. They have been dispossessed and Government have treated those tenants as unauthorised cultivators. Such is the treatment given to our people by this Government.

One word about the co-operative movement. In our Taluk, the Government is not extending co-operatives.

**Mr. DEPUTY SPEAKER.**—The hon. member will have another chance and he may then cover the other points. Now there is no time. So he may conclude his speech.

**Sri N. B. SIRDESAI.**—If you do not wish to give me any more time, I thank the Chair and conclude.

† **ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).**—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೆ ನಾವು ಬಹಳ ಮುಖ್ಯವಾದ ಈ ಅವಿಶ್ವಾಸ ನಿರ್ಣಯದ ಮೇಲೆ ಮುಖ್ಯಮಂತ್ರಿಗಳು ಕೊಟ್ಟಂಥ ತೀರ್ಮಾನವನ್ನು ಕೇಳಿದೆವು. ಅವರು ಬಹಳ ಸೂಕ್ಷ್ಮಮತಿಗಳು ಅಂತ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಶ್ರೇಷ್ಠ ನ್ಯಾಯಾಲಯದಲ್ಲಿ ನಡೆದಂತಹ ಪ್ರಸಂಗಗಳನ್ನು ಮತ್ತು ಮೈಸೂರು ರಾಜ್ಯದ ಹೈಕೋರ್ಟಿನಲ್ಲಿ ನಡೆದ ತೀರ್ಮಾನದ ಸಂದರ್ಭದಲ್ಲಿ ನಡೆದಂತಹ ಕೆಲವು ಪ್ರಸಂಗಗಳನ್ನು ಎತ್ತಿಕೊಂಡು ನಮಗೆ ಅರ್ಥವಾಗುವುದು ಕಷ್ಟ ಅನ್ನುವ ಹಾಗೆ ಬಹಳ ಸೂಕ್ಷ್ಮವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅಂತಹ ಸೂಕ್ಷ್ಮಮತಿಗಳು ಈ ಪ್ರಜಾಪ್ರಭುತ್ವದ ಧರ್ಮ ಸೂಕ್ಷ್ಮವನ್ನು ತಿಳಿದುಕೊಂಡಿದ್ದರೆ ಬಹಳ ಚೆನ್ನಾಗಿತ್ತು. ಪ್ರಜಾಪ್ರಭುತ್ವದಲ್ಲಿ ಕೇವಲ ಅವರು ಸಂಖ್ಯೆಯ ಆಧಾರದ ಮೇಲೆ ನಮ್ಮ ಬಲ ನಿಂತಿದೆ ಎಂದು ಹೇಳುವುದು ತೀರ ಕನಿಕಷ್ಟದ ಮಾರ್ಗ ಎಂದು ಹೇಳುತ್ತೇನೆ. ಯಾವಾಗ ಒಂದು ಶ್ರೇಷ್ಠನ್ಯಾಯಾಲಯ ಇವರ ವಿಚಾರವಲ್ಲಿ ಅನುಮಾನವನ್ನು ವ್ಯಕ್ತಪಡಿಸಿರುವಾಗ ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದರೆ ಇವರ ಸೂಕ್ಷ್ಮಮತಿಗೆ ಇದೂ ಕೂಡ ಒಂದು ಹೆಚ್ಚಿನ ಮೆರುಗನ್ನು ಕೊಟ್ಟ ಹಾಗೆ ಆಗುತ್ತಿತ್ತು. ಆದರೆ ಇದೇ ವಿಚಾರದಲ್ಲಿ ರಾಜೀನಾಮೆಯನ್ನು ಕೊಟ್ಟಿದ್ದ ಶ್ರೀಮಾನ್ ರಾಮಕೃಷ್ಣಹೆಗ್ಡೆಯವರನ್ನು ನಾವು ಅಭಿನಂದಿಸಬೇಕಾಗಿದೆ. ಒಂದು ಶ್ರೇಷ್ಠ ನ್ಯಾಯಾಲಯ ಯಾವಾಗ ಇವರ ಬಗ್ಗೆ ಒಂದು ಅನುಮಾನವನ್ನು ವ್ಯಕ್ತಪಡಿಸಿತೋ ಆ ಕೂಡಲೇ ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅದು ಅವರಲ್ಲಿರತಕ್ಕ ದೊಡ್ಡತನವನ್ನು ತೋರಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಅವರು ರಾಜೀನಾಮೆ ಕೊಟ್ಟ ಹಾಗೆ ಈ ಸೂಕ್ಷ್ಮಮತಿಗಳೂ ರಾಜೀನಾಮೆ ಕೊಟ್ಟಿದ್ದರೆ ಇವರಿಗೆ ಪ್ರಜಾಪ್ರಭುತ್ವ ಧರ್ಮದಲ್ಲಿ ಒಂದು ಸೂಕ್ಷ್ಮ ತಿಳುವಳಿಕೆ ಇದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೆ. ಆದರೆ ಇದೇ ವಿಚಾರದಲ್ಲಿ ಇನ್ನೇ ಮುಖ್ಯ ಮಂತ್ರಿಗಳಾಗಿದ್ದವರು ಈ ದಿವಸ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿತಕ್ಕ ಶ್ರೀ ಎಸ್. ನಿಜಲಿಂಗಪ್ಪನವರು ಯಾವಾಗಲೂ ಮಾತೆತ್ತಿದರೆ ಪ್ರಜಾಪ್ರಭುತ್ವ, ಧರ್ಮ—ಮಹಾತ್ಮಾ ಗಾಂಧಿ ಮತ್ತು ಪಕ್ಷಾಂತರ—ಈ ಮೂರರ ವಿಚಾರದಲ್ಲಿ ಬಹಳವಾಗಿ ಮಾತನಾಡುತ್ತಿದ್ದಾರೆ. ರಾಷ್ಟ್ರದಲ್ಲಿರತಕ್ಕ ಒಂದು ಶ್ರೇಷ್ಠ ನ್ಯಾಯಾಲಯ ಕೊಟ್ಟಿರತಕ್ಕ ತೀರ್ಪನ್ನ ಮಾನ್ಯತೆ ಮಾಡದೆ ಇರತಕ್ಕವರಿಗೆ ಪ್ರಜಾಪ್ರಭುತ್ವದ ತತ್ವಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲವೆಂದು ನಾನು ಹೇಳುತ್ತೇನೆ. ಇನ್ನು ಮಹಾತ್ಮಾ ಗಾಂಧಿ ಹೆಸರನ್ನು ಎತ್ತತಕ್ಕವರಿಗೆ ನಾನು ಹೇಳುವುದೇನೆಂದರೆ ಯಾರು ಆ ಮಹಾತ್ಮ ಗಾಂಧಿಗೆ ಬಹಳ ಅಪ್ರಿಯವಾಗಿದ್ದ ಪಾನ ಅಥವಾ ಕುಡಿತವನ್ನು ಮತ್ತೆ ಜಾರಿಗೆ ತಂದಿದ್ದಾರೋ ಅವರಿಗೆ ಆ ಮಹಾತ್ಮನ ಹೆಸರನ್ನು ಎತ್ತುವುದಕ್ಕೆ ಯೋಗ್ಯತೆಯಿಲ್ಲ ಎಂದು ಹೇಳುತ್ತೇನೆ. ಈ ದಿವಸ ದೇಶದಲ್ಲಿ ಆ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರಿಗೂ ಮತ್ತು ಇಲ್ಲಿರತಕ್ಕ ವೀರೇಂದ್ರ ಪಾಟೀಲರಿಗೂ ಇಷ್ಟವಿಲ್ಲ ; ಅದರ ಬಗ್ಗೆ ಈ ಮಂತ್ರಿ ಮಂಡಲಕ್ಕೆ ಮನ್ನಣೆಯಿಲ್ಲ. ಹೀಗೆ ತ್ರಿಕರಣ ಶುದ್ಧಿ ಇಲ್ಲದ ಜನರು ಈ ಮೂರು ಹೆಸರುಗಳನ್ನು ಎತ್ತುತ್ತಿರುವುದು ಸರಿಯಲ್ಲ. ಅವರ ಬಾಯಲ್ಲಿ ಬೆಳಗಾದರೆ ಪಕ್ಷಾಂತರದ ಮಾತೇ. ಆದರೆ ಈ ಪಕ್ಷಾಂತರ ಅನ್ನುವುದು ಮೊಟ್ಟಮೊದಲನೇಯದಾಗಿ ಈಗಿನ ಶ್ರೀ ವೀರೇಂದ್ರ ಪಾಟೀಲರ ಮಂತ್ರಿತ್ವದ ಕಾಲದಲ್ಲೇ ಅವರಿಂದಲೇ ಪ್ರಾರಂಭವಾಗಿದೆ. ಇದು ಮೊದಲು ಹುಟ್ಟಿದ್ದೇ ಅಲ್ಲ. ಅಷ್ಟಾದರೂ ಅವರು ಪಕ್ಷಾಂತರದ ಮಾತನ್ನು ಆಡಿದ್ದೂ ಆಡಿದ್ದೇ. ಕಾಂಗ್ರೆಸ್ಸಿನವರೇ ಭಾರತಾದ್ಯಂತ ಇದಕ್ಕೆ ಕುಮ್ಮಕ್ಕನ್ನು ಕೊಡುತ್ತಿದ್ದಾರೆ. ಇಷ್ಟು ಧರ್ಮ ಸೂಕ್ಷ್ಮ ಹೇಳತಕ್ಕವರಿಗೆ ಅವರ ಪಕ್ಷದಲ್ಲಿ ಪಕ್ಷಾಂತರ ಆಗತಕ್ಕವರನ್ನು ಕಿತ್ತು ಹಾಕುವುದಕ್ಕೆ ಅವರಿಗೆ ಶಕ್ತಿಯಿಲ್ಲ. ಹಾಗೆ ಇಷ್ಟು ಮುಂದಗತಿಯುಳ್ಳರತಕ್ಕ ಈ ಅಧಿಕಾರದಲ್ಲಿರತಕ್ಕ ಜನರನ್ನು ನಾವು ಇಲ್ಲಿ ಕುಳಿತು ಧರ್ಮ ಸೂಕ್ಷ್ಮವಾದ ವಿಚಾರಗಳನ್ನು ಹೇಳಿ ಇವರನ್ನು ಇಲ್ಲಿಂದ ಕಿತ್ತು ಹಾಕು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ವುದಕ್ಕೆ ಸಾಧ್ಯವಿದ್ದಹಾಗೆ ಕಾಣುತ್ತಿಲ್ಲ. ಇದಕ್ಕಾಗಿ ನಾವು ಬೇರೆ ಒಂದು ಮಾರ್ಗವನ್ನು ಹುಡುಕಬೇಕಾಗುತ್ತದೆ. ನಾವು ನಮಗೆ ಇರತಕ್ಕ ಅಂಥಾ ಆ ಒಂದು ಮಾರ್ಗ ಎಂದರೆ ಅದು ಮತ್ತೆ ಹಿಂಸಾಮಾರ್ಗವನ್ನು ಹಿಡಿಯಬೇಕಾಗುತ್ತದೆ. ನಾವಿನ್ನು ಈ ವಿಷಯವನ್ನು ಇಲ್ಲಿಗೇ ಕೈಬಿಡುತ್ತೇನೆ; ಇದನ್ನು ಹೆಚ್ಚಿಗೆ ಲಂಬಿಸುವುದಕ್ಕೆ ಹೋಗುವುದಿಲ್ಲ.

ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇತ್ತೀಚೆಗೆ ನಡೆದ ತಾಲ್ಲೂಕ್ ಬೋರ್ಡ್‌ಗಳ ಹಾಗೂ ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಕುರಿತು ಕೆಲವು ಮಾತುಗಳನ್ನಾಡಿದ್ದಾರೆ. ಇದನ್ನು ಒಂದು ದೊಡ್ಡ ಘಟನೆ ಎಂದು ಅವರು ಹೇಳಿದ್ದಾರೆ. ಈ ಚುನಾವಣೆಗಳು ಹೇಗೆ ನಡೆದವು ಎಂಬುದನ್ನು ಮಾನ್ಯ ಸಿದ್ದವೀರಪ್ಪನವರು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ಹಾಗೆ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದೇ ರೀತಿ ನಾನು ನಮ್ಮ ಜಿಲ್ಲೆಯಾದ ತುಮಕೂರಿನ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಮಾನ್ಯ ಸಿದ್ದವೀರಪ್ಪನವರು ಹೇಳಿದ್ದನ್ನು ಕೇಳಿದರೆ ಎಷ್ಟೋ ಆಳವಾಗಿ ಇದರ ಪ್ರಸ್ತಾಪ ಮಾಡಿದಂತಾಯಿತು ಅಂತ ಇದ್ದರೆ ನಮ್ಮ ಜಿಲ್ಲೆಯಲ್ಲಿ ಒಬ್ಬ ಡೆಪ್ಯುಟಿ ಮಿನಿಷ್ಟರು ಜಿಲ್ಲೆಯ ಎಲ್ಲಾ ಚುನಾವಣೆಗಳೂ ಮುಗಿಯುವವರೆಗೂ ಅಲ್ಲೇ ಇದ್ದರು. ಅವರು ಕಳೆದ ನವಂಬರ್ ತಿಂಗಳಲ್ಲಿ ಅವರು ನಮ್ಮ ಕುಣಿಗಲ್ ತಾಲ್ಲೂಕ್ ಒಂದರಲ್ಲೇ 25 ದಿವಸಗಳ ಕ್ಯಾಂಪ್ ಮಾಡಿದ್ದರು. ಅವರು ಮಾಡಿದ ಟೂರುಗಳಲ್ಲಿ ಅಫಿಷಿಯಲ್ ಯಾವುದೋ ಅನ್‌ಅಫಿಷಿಯಲ್ ಯಾವುದೋ ಒಂದೂ ಗೊತ್ತಾಗುತ್ತಿಲ್ಲ. ಮೊದಲು ಅವರು ಟೂರ್ ಬರುವುದಕ್ಕೆ ಮುನ್ನ ಒಂದು ಅವರ ಟೂರ್ ಪ್ರೋಗ್ರಾಮು ನಮಗೆಲ್ಲರಿಗೂ ಬರುತ್ತಿತ್ತು. ಈಗ ನಮಗೆ ಅಂಥ ನಕಲುಗಳೇನೂ ಬರುತ್ತಿಲ್ಲ. ನಾವು ಅಲ್ಲಿ ಸದಸ್ಯರಾಗಿದ್ದರೂ ಅವರ ಲೆಕ್ಕಕ್ಕೆ ಇಲ್ಲ. ಅವರು ಜನ ಸೇರಿದ ಕಡೆಯೇ ಒಂದು ಮಾತು ತಾಲ್ಲೂಕು ಪ್ರವಾಸಿಮಂದಿರದಲ್ಲಿ ಮುಖಂಡರನ್ನು ಸೇರಿಸಿ, ನನ್ನ ಹತ್ತಿರ ಹಣವಿದೆ, ನೆಣ ಇದೆ, ಅಧಿಕಾರ ಇದೆ, ನೀವು ಏನು ಮಾಡಿದರೂ ನಾವು ನೋಡಿಕೊಳ್ಳುತ್ತೇವೆ, ನೀವು ಯಾರಿಗೂ ಹೆದರಬೇಕಾಗಿಲ್ಲ, ಧಾರಾಳವಾಗಿ ಖರ್ಚುಮಾಡಿ, ಯಾರು ಏನು ಬೇಕಾದರೂ ಮಾಡಿಕೊಳ್ಳಲಿ, ನಾನು ನೋಡಿಕೊಳ್ಳುತ್ತೇನೆ, ಪೋಲೀಸ್ ಸಿಬ್ಬಂದಿ ಕೊಡುತ್ತೇನೆಂದು ಇವರ ಭಾಷಣ. ಅವರು ಪ್ರತಿನಿತ್ಯ ಸಂಚಾರ ಮಾಡುವಾಗ ಅವರ ಜೊತೆಯಲ್ಲಿ ಪೋಲೀಸ್ ವ್ಯಾನ್. ಅದೂ ರಾತ್ರಿ ಹೊತ್ತು ಇವರ ಸಂಚಾರ. ಪೋಲೀಸರಿಗೆ ಊಟವಿಲ್ಲ. ಇವರಿಗೆ ಚೊಕ್ಕ ಭೋಜನ ಚೆನ್ನಾಗಿ ನಡೆಯುತ್ತಿತ್ತು. ಅಲ್ಲಿ ಒಂದು ನಾಗಸಂದ್ರ ಗ್ರಾಮ. ಅಲ್ಲಿ ಪ್ರಜಾಸೋಷಿಯಲಿಸ್ಟ್ ಪಕ್ಷದ ಸಬ್‌ಕಮಿಟಿ ಸೇರಿತ್ತು. ಆಗ ಲೋಕ ಸಭೆಯ ಸದಸ್ಯರಾದ ಮಾನ್ಯ ಶ್ರೀ ಲಕ್ಕಪ್ಪನವರು ಭಾಷಣ ಮಾಡಬೇಕಾಗಿತ್ತು. ಅದೇ ಕಾಲದಲ್ಲಿ ಮಾನ್ಯ ಉಪ ಮಂತ್ರಿಗಳು ಬರುತ್ತಿದ್ದಾರೆ ಎಂಬುದಾಗಿ ಹೇಳಿ ಅಲ್ಲಿಗೆ ಬಂದು ಅವರ ಭಾಷಣಕ್ಕೆ ಅಡ್ಡಿ ಮಾಡಿದರು. ಆಗ ಪ್ರಜಾಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರು ಅಡ್ಡಿ ಮಾಡಬೇಡಿ, ನಮ್ಮ ಸಭೆ ನಡೆಯಲಿ, ಮೊದಲು ಕಾರ್ಯಕ್ರಮ ನಮ್ಮದು ನಡೆಯಲಿ, ಆಮೇಲೆ ನಿಮ್ಮದಾಗಲಿ ಎಂದು ಹೇಳಿದರು. ಆ ರೀತಿ ಕೇಳಿದ ಮೇಲೆ ಗಲಾಟೆಯಾಯಿತು, ಪ್ರಜಾಸೋಷಿಯಲಿಸ್ಟ್ ಪಕ್ಷದವರ ಲೌಡ್ ಸ್ಪೀಕರ್ ಸೆಟ್, ಅವರ ಹಸ್ತ ಪತ್ರಿಕೆಗಳನ್ನು, ಚಪ್ಪರ ತೋರಣಗಳನ್ನು ಕಿತ್ತು ಹಾಕಿದರು. ಈ ವಿಷಯವನ್ನು ಅಲ್ಲಿನ ಪೋಲೀಸ್‌ನವರಿಗೆ ದೂರು ಕೊಟ್ಟರೂ ಏನೂ ಆಗಿಲ್ಲ. ಆದ್ದರಿಂದ ಮಾನ್ಯ ಉಪ ಮಂತ್ರಿಗಳು ಮೊದಲು ಅಪರಾಧಿ. ಕೇಸ ಹಾಕದಿದ್ದರೆ ಯಾರು ಕೇಳುವುದು, ಪೋಲೀಸಿನವರಿಗೆ ಕೇಸು ಹಾಕಬೇಡಿ ಎಂದು ಹೇಳುತ್ತೇನೆಂದು ಹೇಳಿದ್ದಾರೆ. ಇದು ಈವೊತ್ತು ನಡೆಯುತ್ತಿರುವ ವಿದ್ಯಮಾನ. ಇದು ಒಂದೇ ಅಲ್ಲ. ಇಂತಹವು ಇನ್ನೂ ಅನೇಕವಿವೆ.

ಇನ್ನೊಂದು ವಿಷಯ. ಇವರು ಹಿಂದೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿ ಇದ್ದರು. ಜಿಡ್ಡಗೆರೆ ಗ್ರಾಮ ಪಂಚಾಯುತಿಯ ಅಧ್ಯಕ್ಷ ಚುನಾವಣೆಯ ದಿವಸ ಇವರು 500 ಜನರನ್ನು ಕರೆದು ಕೊಂಡು ಹೋಗಿದ್ದರು. ಏಕೆಂದರೆ 12 ಜನ ಸದಸ್ಯರ ಪೈಕಿ ವಿರೋಧ ಪಕ್ಷದ 9 ಜನರು ಗೆದ್ದಿದ್ದರು. 3 ಜನರು ಇವರ ಪಕ್ಷದವರು ಗೆದ್ದಿದ್ದರು. ಆ 9 ಜನರನ್ನು ಅವರ ಮನೆಯಲ್ಲಿ ಸೇರಿಸಿಕೊಂಡು ತಮ್ಮವರಿಗೆ ಚುನಾಯಿಸಬೇಕೆಂದು ಕೈಕಾಲು ಹಿಡಿದರು. ಕೇವಲ 300 ಜನರು ಇರತಕ್ಕ ಪ್ರಜಾ ಸಂಖ್ಯೆ ಇರುವ ಊರಿಗೆ 500 ಜನರನ್ನು ಕರೆದುಕೊಂಡು ಹೋಗಿದ್ದರು. ಆದರೂ ಅವರ ವಿರೋಧ ವಾಗಿಯೇ ಅವರು ಓಟುಮಾಡಿದ್ದಾರೆ.

ಇನ್ನೊಂದು ವಿಷಯ. ಗುಬ್ಬಿ ತಾಲ್ಲೂಕಿನಲ್ಲಿ ಅಧ್ಯಕ್ಷ ಚುನಾವಣೆ ನಡೆಯಿತು. ಅಲ್ಲಿ ಒಬ್ಬ ತಾಲ್ಲೂಕು ಬೋರ್ಡ್ ಸದಸ್ಯ ಸ್ವತಂತ್ರವಾಗಿ ಗೆದ್ದಿದ್ದರು. ಅವರನ್ನು ಒಂದು ಕೊಠಡಿಯೊಳಗೆ-

ಕೂಡಿಕೊಂಡು ಇಟ್ಟುಕೊಂಡಿದ್ದರು. ಆಗ ನಮ್ಮ ಸದಸ್ಯರು ಹೋಗಿ ಪೋಲೀಸ್‌ನವರಿಗೆ ದೂರು ಕೊಟ್ಟರೂ ಏನೂ ಆಗಿಲ್ಲ. ಆಗ ನಾವು ಆ ಬಾಗಿಲನ್ನು ಒಡೆದು ಅವರನ್ನು ಈಚೆಗೆ ಕರೆದುಕೊಂಡು ಹೋಗಬೇಕಾಯಿತು.

ಇನ್ನೊಂದು ಇದೇ ಮಾನ್ಯ ಉಪಮಂತ್ರಿಗಳು ಕಾಂಗ್ರೆಸ್ ಆಫೀಸಿನಲ್ಲಿ ಬಿದರೆಯ ಒಬ್ಬ ಹರಿಜನ ಸದಸ್ಯರನ್ನು ಬೀಗಹಾಕಿ ಇಟ್ಟುಕೊಂಡಿದ್ದರು. ಇದು ಇವರು ಮಾಡುವಂಥ ಕೆಲಸಗಳ ವೈಖರಿ.

ಇನ್ನು ನಾಗಸಂದ್ರದ ಹತ್ತಿರ ಹೈಲೆವಲ್ ಕಾಜ್‌ವೇ ಕಟ್ಟಬೇಕೆಂದು 10 ಸಾವಿರ ರೂಪಾಯಿಗಳನ್ನು ಡ್ರಾ ಮಾಡಿದ್ದರೂ ಇನ್ನೂ ಆ ಕೆಲಸ ನಡೆಯಲಿಲ್ಲ. ಈ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನರ್‌ಗೆ ಬರೆದರೆ, ಮಾನ್ಯ ಉಪಮಂತ್ರಿಗಳು ಅದನ್ನು ವಿಚಾರಣೆ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರೆ. ಇಂಥಾದ್ದಕ್ಕೆ ನಮಗೆ ರಕ್ಷಣೆ ಹೇಗೆ, ನ್ಯಾಯ ಹೇಗೆ ಸಿಗುವುದು ?

ನಮ್ಮ ತಾಲ್ಲೂಕಿನಲ್ಲಿ ಇನ್ನೊಂದು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಶಾಲಾ ಕಟ್ಟಡಗಳಿಗೆ ಸುಣ್ಣ ಬಣ್ಣ ಹಾಕುವುದಕ್ಕೆ 10 ಸಾವಿರ ರೂಪಾಯಿಗಳು ಖರ್ಚು ಆಗಿದ್ದರೂ ಅಲ್ಲಿ ಕೆಲಸ ನಡೆಯಲಿಲ್ಲ. ಇದರ ಬಗ್ಗೆ ದೂರನ್ನು ವಿಜಿಲೆನ್ಸ್ ಕಮಿಷನರ್‌ಗೆ ಕಳುಹಿಸಿದರೆ ಅದನ್ನು ವಿಚಾರ ಮಾಡಬೇಡಿ ಎಂಬುದಾಗಿ ಅಪ್ಪಣೆಮಾಡಿದ್ದಾರೆ. ಅಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಲೆವಲ್‌ನಲ್ಲಿರತಕ್ಕ ಎಲ್ಲಾ ಅಧಿಕಾರಿಗಳ ಮೇಲೆ ಇವರದೇ ಸರ್ವಾಧಿಕಾರ ಆಗಿದೆ. ಅಲ್ಲಿ ಅನೇಕ ರೀತಿಯಲ್ಲಿ ಅವರನ್ನು ಬೆಳೆಸುತ್ತಿದ್ದಾರೆ ಹೀಗೆಯೇ ಅಲ್ಲಿ ನಡೆದಿರುವ ವಿದ್ಯಮಾನ.

ಇನ್ನು ಕೆಲವು ಸೊಸೈಟಿಗಳಿಗೆ ಆಹಾರಪದಾರ್ಥಗಳನ್ನು ಕೊಡಿ ಎಂದು ಹೇಳಿದರೆ ಕೆಲವಕ್ಕೆ ಕೊಡುತ್ತಿದ್ದಾರೆ, ಇನ್ನು ಕೆಲವಕ್ಕೆ ಕೊಡುತ್ತಾ ಇಲ್ಲ. ಹೀಗೆ ಇವರ ವಿದ್ಯಮಾನಗಳು ನಡೆಯುತ್ತಿವೆ. ಕೆಲವು ಸೊಸೈಟಿಗಳಿಗೆ ಆಹಾರ ಪದಾರ್ಥಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಹೊನ್ನಚನಹಳ್ಳಿ ಮಿಲ್ಕ್ ಕೋ-ಅಪರೇಟಿವ್ ಸೊಸೈಟಿಗೆ ಆಹಾರಧಾನ್ಯ ಕೊಡಬೇಡಿ ಎಂದು ಹೇಳುತ್ತಾರೆ, ಆದರೆ ನೀಲಸಂದ್ರ ಮಿಲ್ಕ್ ಕೋಆಪರೇಟಿವ್ ಸೊಸೈಟಿಗೆ ಕೊಡಿಸಿದ್ದಾರೆ. ಇವರು ಹೇಳಿದ ಹಾಗೆ ಪ್ರತಿ ಅಧಿಕಾರಿಗಳು ಕೇಳಿದರೆ ಅವರಿಗೆ ಕ್ಷೇಮ ಇದೆ, ಇಲ್ಲದಿದ್ದರೆ ಯಾವ ಅಧಿಕಾರಿಗಳಿಗೂ ಕ್ಷೇಮ ಇಲ್ಲ. ಈ ರೀತಿ ತಾಲ್ಲೂಕು ಬೋರ್ಡು ಚುನಾವಣೆಗಳನ್ನು ನಡೆಸಿರತಕ್ಕ ವಿದ್ಯಮಾನ. ಶ್ರೀಮಾನ್ ನಿಜಲಿಂಗಪ್ಪನವರು ವಿರೋಧ ಪಕ್ಷ ನಿರ್ನಾಮವಾಗಿದೆ, ಅದನ್ನು ಬಲಪಡಿಸುವುದಕ್ಕೆ ನಾನೇ ಬಂದು ಬಲಕೊಡುತ್ತೇನೆ ಎಂದು ಹೇಳಿದ್ದಾರೆ. ನೀವು ಮೋಸ ಹೋದಿರಿ ! ಇವರು ಧೃತರಾಷ್ಟ್ರನು ಭೀಮನಿಗೆ ತೋರಿಸಿದ ಪ್ರೇಮವನ್ನು ತೋರಿಸುತ್ತಿದ್ದಾರೆ.

ಇನ್ನೊಂದು ವಿಷಯ. ಸಹಕಾರ ಸಂಘಗಳ ವಿಚಾರವಲ್ಲಿ ಬಹಳ ಪ್ರಸ್ತಾಪ ಮಾಡಿದ್ದಾರೆ. ನಿನ್ನೆಯ ದಿನ ಒಂದು ಪ್ರಶ್ನೆಗೆ ಉತ್ತರ ಬಂದಿದೆ—ಮಂಡ್ಯ ಜಿಲ್ಲೆಯಲ್ಲಿ 238 ಡಿಫಂಕ್ಟ್ ಸೊಸೈಟಿಗಳಿವೆ ಎಂದು. ಪ್ರತಿ ಜಿಲ್ಲೆಯಲ್ಲೂ ಇದು ನಡೆದಿವೆ. ಎಲ್ಲಿ ಕಾಂಗ್ರೆಸ್ಸಲ್ಲದ ಬೇರೆಯವರಿದ್ದಾರೋ ಅಂಥವರಿಗೆ ಉಳಿಗಾಲವಿದೆ. ನಾನು ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಕುಣಿಗಲ್‌ನಲ್ಲಿ ಮಾಗಡಿಪಾಳ್ಯ ಸ್ಮಿತಿ ಕ್ರಾಫ್ಟ್ಸ್ ಕೋಆಪರೇಟಿವ್ ಸೊಸೈಟಿಗೆ, ನಮ್ಮ ಡೆಪ್ಯುಟಿ ಮಂತ್ರಿಯವರಾದ ಶ್ರೀ ತಮ್ಮಣ್ಣನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿದ್ದಾಗ 3,400 ರೂಪಾಯಿ ದುರುಪಯೋಗವಾಗಿದೆ. ಇದನ್ನು ಆಡಿಟರ್ ಸ್ಪಷ್ಟವಾಗಿ ವರದಿ ಮಾಡಿದ್ದಾರೆ. ಆ ವರದಿ ಮಾಡಿ ತುಮಕೂರಿನ ಸ್ಪೆಶಲ್ ಆಡಿಟರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ.—

"To

Sri T. Chandrashekaraiah,
Special Auditor,
Tumkur.

Dear Sir,

*Sub.*—Final Audit of accounts for the year 1966-67 of Magadipalya Smithy Grafts Co-operative Society, Kunigal Taluk, District Co-cperative Central Bank, Ltd., S/B Accounts drawn not accounted for special report—submission—regarding.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

I visited the Magadipalya Smithy and Craft Co-operative Society Ltd., Kunigal Taluk for final audit of account for the year 1966-67 on 28th December 1967 during course of my audit and observation I found the following item of irregularities or as like misappropriated funds of the Society by Sri G. Thammanna, President of the above society.

A some of Rs. 3,400 drawn by Sri G. Thammanna, President under the cheques from D.C.C. Bank Branch Office, Kunigal from the cited society savings bank accounts.

| | | | | | |
|---|---|---|---|---|---|
| 1 | 5-11-1966 | to self | ch. No. | 04776 | Rs. 300.00 |
| 2 | 28-11-1966 | ,, | ,, | 0421 | Rs. 1500.00 |
| 3 | 3-1-1967 | ,, | ,, | 0422 | Rs. 1600.00 |
| | | | | | Rs. 3,400.00 |

Remained unaccounted in the society cash book and the proceeds misappropriated. The President of the society is held responsible as he has drawn the said sum of Rs. 3,400 from the D.C.C. Bank himself. The D.C.C. Bank pass book extract copy of which is enclosed herewith appended.

I request your goodself to take immediate needful action is recovering the same with interest at 9 per cent and I solicit your kind instructions in this behalf, for your favour of perusal and needful.

Yours faithfully,

(Sd.) C. S. Ramaiah.

ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಂಥ ಒಬ್ಬ ದೊಡ್ಡ ಮನುಷ್ಯರನ್ನು ತಾವು ಮಂತ್ರಿಮಂಡಲಿದಲ್ಲಿ ಇಟ್ಟುಕೊಂಡರೆ ತಮಗೆ ಇವರಿಂದ ಗೌರವ ಬರುತ್ತದೆಯೇ, ಪ್ರಜಾಪ್ರಭುತ್ವಕ್ಕೆ ಗೌರವ ತರುತ್ತದೆಯೇ ಎಂದು.

2-30 P. M.

ಇದು ಆಲೋಚನೆ ಮಾಡಬೇಕಾದ ಮುಖ್ಯ ವಿಷಯ. ಅನೇಕ ಪ್ರಸಂಗಗಳು ಇರಬಹುದು. ನನಗೆ ಗೊತ್ತಿರುವ ಒಂದು ಪ್ರಸಂಗವನ್ನು ಈ ಮಾನ್ಯ ಸಭೆಯ ಗಮನಕ್ಕೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ, ಮಾನ್ಯ ಅಧ್ಯಕ್ಷರ ಮುಖಾಂತರ ತರುತ್ತೇನೆ. ನಮ್ಮಲ್ಲಿ ನಡೆದಿರತಕ್ಕ ಕೆಲಸದ ವಿಷಯದಲ್ಲಿ ಶ್ರೀಮಾನ್ ಸಿದ್ದವೀರಪ್ಪನವರು ಮಾತನಾಡುತ್ತಾ ಕಾಂಗ್ರೆಸ್ ಪಕ್ಷವನ್ನು ಯಾದವೀ ಸೈನ್ಯಕ್ಕೆ ಹೋಲಿಸಿದರು. ನನ್ನ ಅಭಿಪ್ರಾಯದಲ್ಲಿ ಈ ಕಾಂಗ್ರೆಸ್ ಪಕ್ಷವನ್ನು ಕುರುಸೈನ್ಯ ಎಂದು ಹೇಳಬಹುದು. ಕುರುಸೈನ್ಯದಲ್ಲಿ ಭೀಷ್ಮ, ದ್ರೋಣ, ಅಶ್ವತ್ಥಾಮ ಮುಂತಾದವರು ಇದ್ದಾರೆ. ಭೀಷ್ಮನನ್ನು ಜಯಿಸಲು ಕೃಷ್ಣ ಗುಟ್ಟು ತಿಳಿಯಲು ಧರ್ಮರಾಯನನ್ನು ಕಳುಹಿಸಿ ಅದರಿಂದ ಕೌರವ ಸೈನ್ಯ ನಾಶವಾಗಿದೆ. ಹಾಗೆ ಕಾಂಗ್ರೆಸ್ ಪಕ್ಷದಲ್ಲಿ ಯಾರಾದರೂ ಭೀಷ್ಮ ಇದ್ದರೆ ಅವರು ಕುರು ಸೈನ್ಯವನ್ನು ನಾಶ ಮಾಡುವುದಕ್ಕೆ ಸಹಾಯ ಮಾಡಲಿ ನಾಶ ಮಾಡುವ ಕ್ರಮವನ್ನು ಮೊದಲು ಹೇಳಲಿ ಇಷ್ಟು ವಿಷಯಗಳನ್ನು ಸೂಚನೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ಸೂಚನೆಗೆ ನಾನು ಕೆಲವು ತಿದ್ದುಪಡಿಗಳನ್ನು ಕಳುಹಿಸಿದ್ದೇನೆ. ತಿದ್ದುಪಡಿಗಳನ್ನು ಬೆಂಬಲಿಸುತ್ತಾ ನಾನು ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಮೊನ್ನೆತಾನೆ ನಡೆದ ತಾಲ್ಲೂಕು ಬೋರ್ಡುಗಳ ಚುನಾವಣೆಯ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಮಂತ್ರಿಮಂಡಲದ ವಿಷಯದಲ್ಲಿ ನಾನು ಈಗ ಯಾವುದೇ ರೀತಿಯಲ್ಲಿ ಮಾತನಾಡುವುದಿಲ್ಲ. ಆ ವಿಷಯದಲ್ಲಿ ನಾವು ಇನ್ನೂ ಕೆಲವು ಕಾಲ ಕಾಯಬೇಕಾಗುತ್ತದೆ. ಆದರೆ ಕೆಲವು ಮಾತುಗಳನ್ನು ಅವರ ಗಮನಕ್ಕೆ ತರುವುದು ಅವಶ್ಯಕ. ಮಾನ್ಯ ಮುಖ್ಯ ಮಂತ್ರಿಗಳ ಸಹೋದ್ಯೋಗಿಗಳು ಒಬ್ಬರು ಅವರ ಹೆಸರನ್ನು ಕೆಡಿಸುತ್ತಿದ್ದಾರೆಂಬುದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈಗತಾನೆ ನಡೆದ ಚುನಾವಣೆಯಲ್ಲಿ ಏನು ತಪ್ಪು ಮಾಡಿದ್ದಾರೆ ಅದಕ್ಕಿಂತಲೂ ಹೆಚ್ಚಾದ ಅನೇಕ ತಪ್ಪುಗಳನ್ನು ಮಾಡಿದ್ದಾರೆ. ಒಂದು ಮಾತನ್ನು ಹೇಳುತ್ತೇನೆ. ಅಭಿವೃದ್ಧಿ ಶಾಖೆಯ ಮಂತ್ರಿಗಳಾದ ಶ್ರೀಮಾನ್ ನಾಡಗೌಡರು ಬಾಗಲಕೋಟೆಯಲ್ಲಿ ಮಾಡತಕ್ಕ ಅನ್ಯಾಯ, ಅತ್ಯಾಚಾರ ಅನಾಚಾರಗಳನ್ನು ಅವರ ಪಕ್ಷದ ಸದಸ್ಯರಾದ ಶ್ರೀ ಬಿ. ಟಿ. ಮುರ್ನಾಳ್ ಅವರಿಂದ ತಿಳಿದುಕೊಂಡರೆ ಗೊತ್ತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರು ಆ ವಿಚಾರಗಳನ್ನು ತಿಳಿದುಕೊಂಡಿದ್ದರೂ ಸಹ ಸುಮ್ಮನೆ ಕುಳಿತುಕೊಂಡಿದ್ದಾರೆ. ಈ ರೀತಿ ಇವರು ಮಾಡಿದರೆ ಜನ ಏನೆಂದಾರು ? ಚುನಾವಣೆಯಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಭಾರತ್ ಸೇವಕ್ ಸಮಾಜದವರು ಕೊಟ್ಟಂಥಹ ಕಾಳುಗಳನ್ನು ತಮಗೆ ಬೇಕಾದವರಿಗೆ ವಿತರಣೆ ಮಾಡಿ ಚುನಾವಣೆಯಲ್ಲಿ ಓಟುಗಳಿಸಿದ್ದಾರೆ ; ಮತ್ತು ಈ ಕಾಳುಗಳನ್ನು ಹಂಚುವ ಬಗ್ಗೆ ದುರುಪಯೋಗ ಮಾಡಿದ್ದಾರೆ. ಈ ವಿಚಾರದಲ್ಲಿ ತನಿಖೆ ಆಗಬೇಕೆಂದು ನಾನು ಹೇಳುತ್ತೇನೆ.

ಕೋ-ಆಪರೇಟಿವ್ ಸೊಸೈಟಿಗಳ ವಿಷಯದಲ್ಲಿ ಹೇಳಬೇಕಾಗಿದ್ದರೆ ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಕೋ-ಆಪರೇಷನ್, ಮತ್ತು ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದಾಗ ಮೈಸೂರು ರಾಜ್ಯದಲ್ಲಿ ಸಹಕಾರ ಚಳುವಳಿ ಬಹಳ ಅಭ್ಯುದಯವನ್ನು ಹೊಂದಿ ಬಹಳ ಚೆನ್ನಾಗಿ ನಡೆಯುತ್ತಿತ್ತು. ಅದು ಈವೊತ್ತು ನಿರರ್ಥಕವಾಗಿದೆ. ಈವೊತ್ತು ನಮ್ಮ ರಾಜ್ಯದಲ್ಲಿ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಶ್ರೀಮಾನ್ ನಾಡಗೌಡರು ಸ್ಕೂಲ್ ಬೋರ್ಡಿನಲ್ಲಿ ಇದ್ದಾಗ್ಯೆ ಮಾಡಿದಂತೆ ಇಲ್ಲಿಯೂ ಎಂದರೆ ಸಹಕಾರಿ ಇಲಾಖೆ ಮತ್ತು ಪಂಚಾಯಿತಿ ರಾಜ್ಯದಲ್ಲೂ ಮಾಡುತ್ತಿದ್ದಾರೆ. ಇವರು ಈ ಸಹಕಾರ ಸಂಸ್ಥೆಗಳನ್ನು ನಡೆಸುವಾಗ ಕೆ. ಎಚ್. ಪಾಟೀಲರು ಮತ್ತೆ ಕೆಲವರು ಇವರ ಜೊತೆಯಲ್ಲಿ ಸಹಕರಿಸಲಿಲ್ಲವೆಂದು ತೊಂದರೆ ಕೊಡುತ್ತಾರೆ. ಇಂಥವರ ಕೈಯಲ್ಲಿ ಬದುಕಿರುವುದಕ್ಕಿಂತಲೂ ಸತ್ತು ಹೋದರೆ ನೆಟ್ಟಗಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—ಸಾಯುವುದಕ್ಕೆ ಬಿಡುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸುಸೂತ್ರವಾಗಿ ಸತ್ತರೆ ಅದಾದರೂ ಪುಣ್ಯ. ಆದರೆ ಇವರು ಪಿನ್ನು ಚುಚ್ಚಿ ಹಿಂಸೆ ಮಾಡುತ್ತಾರೆ. ಬಾಗಲಕೋಟೆ ಬಸವೇಶ್ವರ ಸಂಘದಲ್ಲಿ ಯಾರು ಅಧ್ಯಕ್ಷರಾಗಿದ್ದರೋ ಅವರೇ ಎಂದರ ಶ್ರೀಮಾನ್ ಪಿ. ಎಂ. ನಾಡಗೌಡರು ಇವೊತ್ತು ಸಹಕಾರಿ ಶಾಖೆಯ ಮಂತ್ರಿಗಳಾಗಿದ್ದಾರೆ. ಅವರು ಬಾಗಲಕೋಟೆ ಬಸವೇಶ್ವರ ಸಂಘಕ್ಕೆ ಸಾವಿರಾರು ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ರಾಮಕೃಷ್ಣಹೆಗಡೆಯವರ ಆಶೀರ್ವಾದವನ್ನು ಪಡೆದ ಗದುಗಿನ ಶಿಕ್ಷಣ ಸಂಸ್ಥೆಗೆ ಹಣವನ್ನು ಮಂಜೂರು ಮಾಡಬೇಕೆಂದು ಕೇಳಿದಾಗ ಅದಕ್ಕೆ ಕಾಯಿದೆ ಅಡ್ಡ ಬಂದಿದೆ. ಇದರಲ್ಲಿ ಪಕ್ಷಪಾತ ಇದೆಯೋ ಅಥವಾ ಇಲ್ಲವೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಇದಕ್ಕೆ ಬೇಕಾದರೆ ನಾನು ಡಾಕ್ಯುಮೆಂಟರಿ ಎವಿಡೆನ್ಸ್ ಪ್ರೊಡ್ಯೂಸ್ ಮಾಡುತ್ತೇನೆ. ನಮ್ಮ ಗದುಗಿನ ಶಿಕ್ಷಣ ಸಂಸ್ಥೆಗೆ ಹಣದ ಅವಶ್ಯಕತೆ ಇಲ್ಲ ಗದುಗಿನ ನೂರಾರು ಜನ ವ್ಯಾಪಾರಸ್ಥರು ಆ ಸಂಘಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೂಡಿಸಿಕೊಡುತ್ತೇವೆ ಬನ್ನಿ ಎಂದು ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ, ಚುನಾವಣೆಯಲ್ಲಿ ಹಾಗೂ ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ ಏನು ನಡೆದಿದೆ ಅದರ ಬಗ್ಗೆ ತನಿಖೆ ಮಾಡಲೇಬೇಕು. ನಿಜವಾಗಿಯೂ ನಿಮ್ಮಲ್ಲಿ ದೇಶವನ್ನು ಉದ್ಧಾರ ಮಾಡಬೇಕೆಂಬ ಭಾವನೆ ಇದೆಯೇ ? ನಿಮ್ಮಲ್ಲಿ ಒಂದು ಆದರ್ಶ ಇದೆಯೇ ? ನಿಮಗೆ ಬೇಕಾದಂತಹ ಆದರ್ಶವನ್ನು ಇಟ್ಟುಕೊಂಡು ನಿಮಗೆ ಬೇಕಾದವರಿಗೆ ಸಹಾಯ ಮಾಡಿ ಬೇಡವಾದವರಿಗೆ ಕೆಡಕು ಮಾಡಿದ್ದೀರಿ. ತರುಣರಾದ ಮುಖ್ಯ ಮಂತ್ರಿಗಳು ಬಹಳ ಚೆನ್ನಾಗಿ ಆಡಳಿತ ಮಾಡುತ್ತಾರೆ, ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಎನ್ನುವ ಭಾವನೆ ಜನತೆಯಲ್ಲಿ ಇರುವಾಗ ಶ್ರೀಮಾನ್ ನಾಡಗೌಡರು

(ಶ್ರೀ ಕೆ. ಎಚ್. ಪಾಟೀಲ್)

ಇಂಥಾ ಅನ್ಯಾಯಗಳನ್ನು ಮಾಡಿ ಅವರ ಹೆಸರನ್ನು ಕೆಡಿಸುತ್ತಿದ್ದಾರೆ. ಶ್ರೀಮಾನ್ ನಾಡಗೌಡರು
ಬಾಗಲಕೋಟೆಯಲ್ಲಿ ಏನೇನು ಅನ್ಯಾಯ, ಅತ್ಯಾಚಾರ, ಅನಾಚಾರ ಮಾಡಿದ್ದಾರೆಂಬ ಬಗ್ಗೆ
ಒಂದು ಎನ್‌ಕ್ವೈರಿ ಕಮಿಷನ್ ನೇಮಿಸಿ, ಅದಕ್ಕೆ ಬೇಕಾದ ಸಾಕ್ಷಿಗಳನ್ನು ನಾವು ಒದಗಿಸುತ್ತೇವೆ.
ಅವರು ನಿರಪರಾಧಿಯೆಂದು ತೀರ್ಮಾನವಾದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ
ಯನ್ನು ಕೊಡುತ್ತೇನೆ. ನಾನು ಗದುಗಿನಲ್ಲಿ ಆಯಿಲ್ ಪ್ರೋಸೆಸಿಂಗ್ ಕೋ-ಅಪರೇಟೀವ್ ಸಂಸ್ಥೆಯ
ಅಧ್ಯಕ್ಷನಾಗಿದ್ದಾಗ ಬ್ಯಾಂಕಿನಿಂದ ಹಣ ಪಡೆಯುವುದಕ್ಕೆ ಟೆಂಪರರಿ ಗ್ಯಾರೆಂಟಿ ಕೊಡಬೇಕೆಂದು
ಸರ್ಕಾರದವರನ್ನು ಕೇಳಿದಾಗ ಗ್ಯಾರಂಟಿ ಕೊಡಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ನನ್ನ
ಮೇಲಿನ ದ್ವೇಷದಿಂದ ಅದಕ್ಕೆ ಗ್ಯಾರೆಂಟಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ತಮಗೆ
ಯಾರು ಬೇಕೋ ಅಂಥವರಿಗೆ ಸಹಾಯ ಮಾಡುವುದು, ಬೇಡವಾದವರಿಗೆ ಬಿಡುವುದು ಈ ಪ್ರಕಾರ
ವಾಗಿ ಇವರು ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮನ್ನು ಕೇಳುವ ಭೂಪ ಯಾರಿ
ದ್ದಾರೆ ಎಂಬ ಭಾವನೆ ನಿಮ್ಮಲ್ಲಿ ಇದೆ. ತಮ್ಮಲ್ಲಿ ವಿವೇಕ ಏನಾದರೂ ಇದ್ದರೆ ನಾನು ಹೇಳುವ
ವಿಚಾರದ ಬಗ್ಗೆ ಯೋಚನೆ ಮಾಡಿ ತನಿಖೆ ಮಾಡಿ ನೋಡಿ. ಅಲ್ಲಿಯ ಅಧಿಕಾರಿಗಳಲ್ಲಿ ಬಹಳಷ್ಟು
ದರ್ಪ ಇದೆ. ತಮ್ಮನ್ನು ಕೇಳುವವರೇ ಇಲ್ಲ ಎಂದುಕೊಂಡಿದ್ದಾರೆ. ಈವೊತ್ತಿನದಿವಸ ತಾವು
ವಿರೋಧಪಕ್ಷದ ಕೈಯಲ್ಲಿರುವ ಸಂಸ್ಥೆಗಳನ್ನು ತುಳಿಯುತ್ತಿದ್ದೀರಿ. ವಿರೋದಪಕ್ಷದವರ
ಕೈಯಲ್ಲಿರುವ ಸಂಸ್ಥೆಗಳಿಗೆ ಹಣದ ಸಹಾಯ ಮಾಡಿಕೊಡಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಭಾಗದ
ಕೋ-ಅಪರೇಟಿವ್ ಕ್ಯಾಟಲ್ ಫೀಡ್ ಪ್ರೋಸೆಸಿಂಗ್ ಸೊಸೈಟಿಯ ಬಗ್ಗೆ ಹಿಂದಿನ ಮುಖ್ಯ ಮಂತ್ರಿ
ಗಳಾಗಿದ್ದ ಶ್ರೀಮಾನ್ ನಿಜಲಿಂಪ್ಪನವರು ನಾನು ಆ ಸೊಸೈಟಿಗೆ ಭೇಟಿ ಕೊಡುವವರೆಗೆ ಹಣದ
ಸಹಾಯ ಕೊಡಬಾರದೆಂದು ಹೇಳಿದ್ದರು. ಈ ರೀತಿ ಮಾಡುವುದು ಸರಿಯಲ್ಲ. ಸ್ವಾಮಿ, ತಮ್ಮ
ಮೂಲಕ ಶ್ರೀಮಾನ್ ವೀರೇಂದ್ರಪಾಟೀಲರಿಗೆ ನಿವೇದನೆ, ಮಾಡುತ್ತೇನೆ, ಏನೆಂದರೆ ಇನ್ನು ಮುಂದೆ
ಯಾದರೂ ನಮ್ಮ ಜನರಿಗೆ ನ್ಯಾಯ ದೊರಕುವಂತೆ ಭರವಸೆ ಕೊಡಬೇಕು ಎಂದು ಜೆಸ್ಟೀಸ್ ಈಸ್
ಸೋಲ್ಡ್ ಎಂದು ಆಗಬಾರದು. ಆ ರೀತಿಯಾದರೆ ನಾವುಗಳು ಕೆಂಪುಬಂಗಲೆಗೆ ಹೋಗಬೇಕಾಗು
ತ್ತದೆ. ಜನರಿಗೆ ಸರಿಯಾದ ನ್ಯಾಯ ಸರ್ಕಾರದಿಂದ ಸಿಗದೆ ಕಳೆದ 22 ದಿವಸಗಳಲ್ಲಿ 450ಕ್ಕೂ ಮೀರಿ
ರಿಟ್ ಅರ್ಜಿಗಳು ಹೈಕೋರ್ಟಿಗೆ ಹೋಗಿವೆ. ಗದಗಿನ ಮುನಿಸಿಪಾಲಿಟಿಗೆ ಇನ್ನೂ ಚುನಾವಣೆ
ನಡೆಸಿಲ್ಲ. ಇನ್ನೂ ಆಡಳಿತಾಧಿಕಾರಿಯನ್ನೆ ಮುಂದುವರಿಸಿದ್ದಾರೆ. ಚುನಾವಣೆ ನಡೆಸಿದರೆ
ಕಾಂಗ್ರೆಸ್ಸೇತರರೇ ಆರಿಸಿ ಬರುವರೆಂದು ಸರ್ಕಾರದವರು ತಿಳಿದು ಆಡಳಿತಾಧಿಕಾರಿಯನ್ನು
ಮುಂದುವರಿಸಿದ್ದಾರೆ. ಈ ಅಧಿಕಾರಿಯಾದರೂ ಸಹ ಸರಿಯಾಗಿ ವರ್ತಿಸುತ್ತಿಲ್ಲ. ಗದಗ್‌ನಲ್ಲಿ
ಒಬ್ಬ ಶ್ರೀಮಂತನಿಗೆ ತನ್ನ ಜಮೀನಿನಲ್ಲಿ ಗೋಡೆಯನ್ನು ಕಟ್ಟಿಸುವುದಕ್ಕೆ ಈ ಅಧಿಕಾರಿ ಅಪ್ಪಣೆ
ಕೊಟ್ಟಿದ್ದಾರೆ. ಇದರಿಂದ ಅಲ್ಲಿದ್ದ ರಸ್ತೆಯು ಬಂದ್ ಆಯಿತು. ಇದರಿಂದ ನೂರಾರು ಕುಟುಂಬ
ಗಳವರಿಗೆ ತೊಂದರೆಯಾಗಿದೆ. ಅವರಿಗೆ ಓಡಾಡುವುದಕ್ಕೆ ರಸ್ತೆ ಇಲ್ಲವಾಗಿದೆ. ಒಬ್ಬ ಶ್ರೀಮಂತನಿಗೆ
ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನೂರಾರು ಕುಟುಂಬಗಳಿಗೆ ಅನ್ಯಾಯ ಮಾಡಿದ್ದಾರೆ.
ಬಡಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಇಚ್ಛೆ ತಮಗಿದ್ದರೆ ಆ ಗೋಡೆಯನ್ನು
ಕೆಡವಿಸಲು ಮುನಿಸಿಪಾಲಿಟಿಯವರಿಗೆ ಹೇಳಬಹುದಾಗಿತ್ತು. ಆದರೆ ನಿಮ್ಮ ಬೆಂಬಲ ಕೋಟ್ಯಾ
ಧೀಶ್ವರರ ಕಡೆಗೆ ಇದೆ. ಗದಗ ಮುನಿಸಿಪಾಲಿಟಿಯ ಚುನಾವಣೆ ನಡೆಸುವ ಶಕ್ತಿ ನಿಮಗಿಲ್ಲ.
ಚುನಾವಣೆ ನಡೆಸಿದರೂ ಸಹ ಟಿ.ಡಿ.ಬಿ. ಗೆ ನಡೆಸಿದಂತೆ ನಡೆಸುತ್ತೀರಿ. ನಿಮ್ಮ ಮನಸ್ಸಿನಲ್ಲಿರುವು
ದನ್ನು ಜನರು ಇವತ್ತು ತಿಳಿದಿದ್ದಾರೆ. ನಾನು ಹೇಳಿದ ಎಲ್ಲಾ ವಿಷಯಗಳನ್ನು ಅರಿತುಕೊಂಡು
ಮಂತ್ರಿಗಳು ಮೊದಲು ತಮ್ಮ ಪಾವಿತ್ರತೆಯನ್ನು ಕಾಯ್ದುಕೊಂಡರೆ ನಂತರ ಅಧಿಕಾರಿಗಳು
ತಮ್ಮಿಂದ ತಾವೇ ಒಳ್ಳೆಯವರಾಗುತ್ತಾರೆಂದು ಕಳಕಳಿಯಿಂದ ಬಿನ್ನಹ ಮಾಡಿಕೊಂಡು ಈ ನನ್ನ
ಎರಡು ಮಾತುಗಳನ್ನು ಮುಗಿಸುತ್ತೇನೆ.

**Sri K. PUTTASWAMY** (Minister for Labour).—Sir, it was agreed that the debate should close at 2-45 p. m. and the reply will commence.

**Mr. DEPUTY SPEAKER.**—The reply will begin at 3 O'clock.

**Sri V. N. PATIL** (Humnabad).—Mr. Speaker, Sir, I do not propose to thank the Governor for the Address which he was kind enough to deliver. I can only say that His Excellency the Governor deserves all the sympathies and respect from this House, but not thanks, because

none of the socialistic policies are discussed in the Address. There is not even an iota to show that this Government will carry on some socialistic policies with regard to the benefits to the common man, land to the tiller and suppression of the attrocities that were being committed on the people. There is not even a hint to suggest what steps the Government has taken to tackle the problems of drinking water in villages where not a single well exists to quench atleast the thirst of the people in the drought sticken areas in the State. If at all, the funds in the name of Famine Relief are untilised, it has gone to the coffers and to the vested interests, but not to the villager, the common man. Hardly about four months back we had to face the worst drought conditions in the State in all the 19 districts, and prior to that, in the month of March in North Karnatak area and particularly in Bidar District the standing jawar crop was ruined and most of the villagers could not get even a quintal of jawar to their houses. Under such circumstances, a pious assurance was given by Chief Minister on the floor of this House, that no levy shall be collected from those agriculturists and no land revenue also shall be collected. But, the authorities have adopted harassing methods to collect the levy. Inspite of these pious assurances by the Chief Minister on the floor of this House, we see the panic and pathetic conditions of the agriculturists in the villages, their bullocks were auctioned, the zinc sheets of the sheds were removed and the belongings of the beedi shop owners were removed and auctioned. This happened at Mana Akheli to a poor shopkeeper by name Md. Khasheem whose shop was practically burgled by the Revenue Inspector in the name of taccavi recovery with false panchanama and undervalued estimation of the goods most of them not included in the list. Such was the condition in most of the north-Karnatak area districts. I appeal to the Government to postpone the collection of the long-standing taccavi loans which have accumulated for the last ten years on account of the unfortunate conditions there. More than 40 such auctions have taken place in Humnabad and Bhalki talukas and the same is the condition in other parts of the district. At Meenkeri one Veerappanna Kotgi's land is attached for the loan he took for well and which is a failure well. At Bemalkhed one Gurappa Hudadhali's land is attached for well loan recovery and to complete that failure well this poor man has spent 30 thousand rupees by raising loan. Government cannot wait for one more year to allow him to raise one crop to repay loan, sell the land and ruin him. This is the relief a poor peasant gets at your hands. The people are approaching the Deputy Commissioner to survey the crop, but no survey is being conducted by the Government, and after three months when the crop report will come that it was 'A' class crop, the agriculturists are made to pay the levy in full. I want to place a proposal before this House to insist upon the Government to instruct the Deputy Commissioners throughout the State immediately to have a survey of all standing crops, as to the percentage of crop, the condition of crop, etc., so that after harvest the poor agriculturists are not put to any difficulty. Those who

(SRI V. N. PATIL)

have got sufficient grain must be made to pay the levy. How about the poor agriculturist who has not got even half a quintal of jawar in his house? Levy is being collected on the basis of previous rating, in which case the poor agriculturist has to purchase jawar in order to give levy to the Government. The Governor's Address does not contain even one word about the peasantry and agriculturists, the hardships they are facing, and the attempt, if any, the Government proposes to relieve the peasantry from this turmoil.

I do not know whom this Ministry is representing—whether it is the big landed agricultural class or whether the people who are holding some big industries and large portion of lands. I cannot understand the attitude of the Government. The Governor's Address does not contain a single word about those small agriculturists, landless workers who are in possession of the land for the last 20 to 30 years. They are regularly paying to the Government the SIVAI JAMABANDI assesment. Yet after 30 years continuous possession they are not the owners of that small holding. Exorbitant penalty is being levied on them. This accumulated amount of penalty known as tawan is sometimes hundred times the value of his small hut and household belonging and pay it to the Government. He will have to sell himself. Has this Government any proposal of starting slavery to repeat history? The Government have not taken any measures to make them the owners of such lands. Not even a word is found in the Governor's Address about these poor people. When that is the position, how the Governor deserves thanks? Personally speaking, the Governor is in favour of landless people and the poor agriculturists. But constitutionally he is bound to give an address as advised by the Council of Ministers. He has not been properly advised by the Council of Ministers as to what are all the common problems of to-day. He knows that the land should belong to the tiller. But who is to advise him? The Chief Minister says that he does not believe in socialism in excise contract auction matters. I ask whether you really believe in giving land to the tiller and whether you believe in distributing unoccupied surplus land to the landless? Can you take steps to write off the levy system, or exemt people who have no surplus production. The poor agriculturists are under Takavi loan arrears. Will you take steps to reduce the arrears by giving remission to certain extent in deserving cases where the purpose for which loan was taken has failed due to no fault of the agriculturists? On the other hand you are instructing your officers to collect the takavi loan arrears and levy by force. How can these poor folk give when they are starving? When they are struggling hard for their existance, from where they should bring? When such is the position, the poor agricultural peasantry cannot meet your abnormal demands. Nearly 70 per cent of the population of the State is depending upon agriculture. Are

you representing them? If you are really repres enting themyou would not have stooped to these methods. Some rotton jowar was distributed for consumption at Bidar proper town in some of the fair price shops. On 7th December 1968 at shop No. 10 under TAPCMSL Bidar alone 100 bags of worm eaten jawar was found being distributed. On the protest of some people it was sealed on 12th December 1968. It fell to the lot of a Municipal Councillor, Joshi to present the sample in the District Food Committee Meeting and that sample I present to this august House to show whether this Government consi'ers the rural folk as human beigs and this shows the poorer section is being treated as animals. More than 800 quintals of jowar of this quality was distributed which was unfit for human consumption. It was brought to the notice of the Government. What action has been taken to punish those who are responsible for this distribution of rotton jowar in Bidar District?

Lastly, I want to come to the law and order situation. Privileges under the law and order does not belong to any political party. In any type of Government, the peace has to be maintained. Protection should be given to the citizen to whichever party he belongs. But what happened during the Taluk Board and Municipal election campaign in Bidar District? Our workers were wantonly attacked by Congressmen. The incidents that occurred during election were brought to the notice of the Chief Minister and we wanted protection. I have sent an S.O.S. from Bidar. But no action has been taken. The Opposition was attacked. The Opposition workers were attacked and obstructed with a view to carry on the election campaign. If the Opposition is attacked and obstructed, there cannot be fair election. Wine and violence were writ large by Congressmen. When I brought this to the notice of the Superintendent of Police, he was kind enought to inform me that he would do his best to maintain law and order and some protection would be given to the opposition. But what happended? Some people were axed in the very presence of the Sub-Inspector at Ghatboral village. He was unable to take any action. He was helpless. When these injured persons were taken to Humnabad Hospital profusely bleeding with axe injuries on head even the first aid was not given and they were not admitted by the Doctor there. All these persons were in a pathetic condition. The Surgeon there never obliged and he refused to give even the first aid. I got them removed to the Bidar Hospital where they were admitted and treatment was given to these unfortunate people. When the District Surgeon was able to admit these injured persons, why did this Doctor at Humnabad Hospital refused to give even the first aid? This is all the work of your Congress Party. Power at any cost has become your slogan. The attitude of the Government do not bring credit to the very principles of democracy. Do not dig the grave of democracy by your party's fascist methods. The corrupt attiude should be curbed down. As the Governor's address fails to mention this grave danger

(SRI V. N. PATIL)

to democracy we politely have to refuse to thank His Excellency the Governor and instead suggest amendments to his Address. With these words I conclude and thank the Chair.

†ಶ್ರೀ ಪಿ. ಎಲ್. ಶಿವಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ವಿಮರ್ಶೆ ಮಾಡುತ್ತಿರುವಾಗ ಇದರಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದು 1969 ನೇ ಇಸವಿಯಲ್ಲಿ ಗಾಂಧಿ ಶತಾಬ್ದಿಯನ್ನು ಬಹಳ ಚೆನ್ನಾಗಿ ಆಚರಿಸುತ್ತೇವೆ ಎಂದು ಹೇಳಿದ್ದಾರೆ. ಆಡಳಿತ ಪಕ್ಷದವರು ಇಂತಹ ಮಹಾತ್ಮರ ಬಗ್ಗೆ ಮಾಡುತ್ತಿರುವ ಕೆಲಸ ಬಹಳ ಮೆಚ್ಚತಕ್ಕ ಕೆಲಸ. ಆದರೆ ಅವರು ಇಂದು ಮಾಡುತ್ತಿರುವ ಕೆಲಸಗಳನ್ನು ನೋಡುವುದಾದರೆ ಸಮಾಜವಾದ ಎಂದು ಏನು ಬಾಯಲ್ಲಿ ಹೇಳುತ್ತಾರೋ ಅದನ್ನು ಕಾರ್ಯರೂಪದಲ್ಲಿ ತರಲು ಅಸಮರ್ಥರಾಗಿದ್ದಾರೆ. ಇಂತಹ ಆಡಳಿತದವರು ಈ ಮಹಾವ್ಯಕ್ತಿಯ ಶತಾಬ್ಧಿಯನ್ನು ಆಚರಣೆಗೆ ತರುತ್ತೇವೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎಷ್ಟು ಮಟ್ಟಿಗೆ ನಮ್ಮ ಮಂತ್ರಿ ಮಂಡಲದವರು ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ಮಂತ್ರಿ ಮಂಡಲದಲ್ಲಿರುವ ನಮ್ಮ ಉಪ ಗೃಹ ಮಂತ್ರಿಗಳು ಎಂದರೆ ಶ್ರೀ ಮಣಿಕರಾವ್ ಪಾಟೀಲ್‌ರವರು ಒಂದು ಕಡೆ ಹೀಗೆ ಹೇಳುತ್ತಾರೆ. (ಇದು ಪ್ರಜಾವಾಣಿ ಪತ್ರಿಕೆಯಲ್ಲಿ 24-11-1968 ರಲ್ಲಿ ಪ್ರಕಟವಾಗಿದೆ) ವೇಶ್ಯಾವೃತ್ತಿಯ ಇತಿಹಾಸವನ್ನು ದೀರ್ಘವಾಗಿ ಪ್ರಸ್ತಾಪಿಸಿದ ಶ್ರೀ ಪಾಟೀಲ್‌ರವರು ನಾಗರಿಕತೆ ಆರಂಭವಾದಾಗಿನಿಂದಲೂ ಈ ವೃತ್ತಿ ಎಲ್ಲ ರಾಷ್ಟ್ರಗಳಲ್ಲಿಯೂ ಇದೆಯೆಂದೂ ಋಗ್ವೇದದಲ್ಲಿ ಕೂಡ ಇದರ ಪ್ರಸ್ತಾಪವಿದೆ ಎಂದೂ ಹೇಳಿ,......
ಇಂತಹ ಒಂದು ಸನ್ನಿವೇಶವನ್ನು ಮಹಾತ್ಮ ಗಾಂಧಿಯವರು ನೋಡಿದ್ದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು. ಇವರು ಮುಂದೆ ಹೋಗಿ ಇನ್ನೂ ಏನು ಹೇಳುತ್ತಾರೆಂದರೆ:

''ವಿಜಯನಗರದ ಸಾಮ್ರಾಜ್ಯದಲ್ಲಿ ವೇಶ್ಯಾ ವೃತ್ತಿಯನ್ನು ಲೈಸನ್ಸ್ ನೀಡುವ ಮೂಲಕ ವೈದ್ಯಕೀಯ ಪರೀಕ್ಷೆ ನಡೆಸುವ ಮೂಲಕ ಕಾನೂನು ಬದ್ಧ ಮಾಡಲಾಯಿತು. ವಾಸ್ತವವಾಗಿ ಲೈಸನ್ಸ್ ಶುಲ್ಕವು ಸರಕಾರಕ್ಕೆ ಒಂದು ಆದಾಯ ಮೂಲವಾಗಿತ್ತು'' ಎಂದರು.

''ಈಗ, ಆಧುನಿಕ ಕಾಲದ ವೇಶ್ಯಾ ವೃತ್ತಿ ಸಮಸ್ಯೆಯನ್ನು ಉಪಸಚಿವರು ಪ್ರಸ್ತಾಪಿಸಿ ಕೊಂಪೆಗಳಲ್ಲಿ ವಾಸಿಸುವವರು, ಭಿಕ್ಷುಕರು, ಕಡಿಮೆ ಕೂಲಿಯ ಕೆಲಸಗಾರರು ಇವರುಗಳು ಈ ವೃತ್ತಿಗೆ ಸುಲಭವಾಗಿ ಎಳೆಯಲ್ಪಡುವವರೆಂದೂ ಎರಡು ಹೊತ್ತಿನ ಊಟಕ್ಕಾಗಿ ಅವರು ಈ ಅನಿಷ್ಟ ವೃತ್ತಿಗಿಳಿಯುವರೆಂದೂ ತಿಳಿಸಿದರು'' ಎಂದು ಇಲ್ಲಿ ಹೇಳಿದ್ದಾರೆ.

ಮಹಾತ್ಮಗಾಂಧಿಯವರಂತೆ ನಮ್ಮ ದೇಶದಲ್ಲಿ ಸರ್. ಎಂ. ವಿಶ್ವೇಶರಯ್ಯನವರಿದ್ದರು. ಇವರಂತಹ ವ್ಯಕ್ತಿಗಳು ಹಾಕಿಕೊಟ್ಟಂತಹ ಯಾವುದಾದರು ಒಂದು ಯೋಜನೆಯನ್ನು ನಮ್ಮ ದೇಶದಲ್ಲಿ ಆಚರಣೆಗೆ ತರುತ್ತಿದ್ದಾರೆಯೇ ? ಇದರಂತೆ ಯಾವ ಯಾವ ನಿರ್ದಿಷ್ಟ ಕೆಲಸಗಳನ್ನು ಮಾಡಬೇಕು ಎನ್ನುವುದನ್ನು ಹೇಳಿದ್ದಾರೆಯೇ ಎಂದರೆ ಏನೂ ಕಾಣುವುದಿಲ್ಲ. ಒಬ್ಬ ಮಗ ಒಂದು ಮನೆಯ ಸಂಸಾರದಲ್ಲಿ ಅವನ ತಂದೆ ಕಾಲವಾದ ಮೇಲೆ ಅವನ ತಾಯಿಯು ಮಾಡಿದ ಅಕೃತ್ಯಗಳನೆಲ್ಲಾ ಮುಚ್ಚಲು ಅವರ ತಂದೆಯ ಫೋಟೋವನ್ನು ಮುಂದಿಟ್ಟುಕೊಂಡು ಕೈಮುಗಿಯುತ್ತಾನೆ. ಅದರಂತೆ ಆಗಿದೆ ಇಲ್ಲಿನ ಸ್ಥಿತಿ.

3-00 P. M.

ಈಗ ಅನೇಕ ಕಡೆ ಕಳ್ಳತನ, ದರೋಡೆ ಶುರುವಾಗಿದೆ. ನಮ್ಮ ತಿಪಟೂರು ತಾಲ್ಲೂಕಿನಲ್ಲಿ 3 ತಿಂಗಳಲ್ಲಿ 30 ಮಕ್ಕಳು ಕಳುವು ಆಗಿವೆ. ಗಂಡು ಮಕ್ಕಳನ್ನು ಬಿಕ್ಷುಕರಿಗೆ ಮಾರಾಟ ಮಾಡುತ್ತಾರೆ, ಹೆಣ್ಣು ಮಕ್ಕಳನ್ನು ಉಪಗೃಹಮಂತ್ರಿಗಳು ಹೇಳಿದಹಾಗೆ ವೇಶ್ಯೆಯರಿಗೆ ಕೊಟ್ಟು ಬಿಡುತ್ತಾರೆ ಎಂದು ಜನಗಳು ಹೇಳುತ್ತಾರೆ. 30 ಮಕ್ಕಳು ಕಳುವಾಗಿದೆ ಎಂದು ಹೇಳಿದರೆ, ಬರೆದು ಕೊಡಿ ಎಂದು ಹೇಳುತ್ತಾರೆ. ಅದಕ್ಕೆ ಅವರು ಹೆದರಿಕೊಳ್ಳುತ್ತಾರೆ. ಹೀಗೆ ಅನೇಕ ಕಳ್ಳತನಗಳಾಗುತ್ತಿವೆ. ಇದನ್ನು ಕಂಡುಹಿಡಿಯಲು ನಮ್ಮ ಸರ್ಕಾರಕ್ಕೆ ಯೋಚನೆಯೇ ಇಲ್ಲ. ಮೊನ್ನೆ ದಿವಸ 5 ರೂಪಾಯಿ ಕಳ್ಳನೋಟು ಸಿಕ್ಕಿತು. ಅದನ್ನು ಇನ್ನೂ ನಿರ್ಮೂಲ ಮಾಡುವುದಕ್ಕಾಗಲಿಲ್ಲ ಇನ್ನು ಯಾವುದು ಮಾಡುತ್ತಾರೆ? ಮುಖ್ಯ ಮಂತ್ರಿಗಳಿಗೆ ಭಯ ಎಂದು ಕಾಣುತ್ತದೆ. ಅವರಿಗೆ ಮತ್ತು ಅವರ ಗುಂಪಿಗೆ ಸಂಬಂದಪಟ್ಟದ್ದು ಏನು ಇದೆಯೋ, ಅದಕ್ಕೋಸ್ಕರ ಈ ಖಾತೆಯನ್ನು ಅವರೇ ಇಟ್ಟುಕೊಂಡಿದ್ದಾರೆ.

ಇನ್ನು ಸಹಕಾರದ ವಿಷಯವಾಗಿ ಹೇಳಿದ್ದಾರೆ. ಪ್ರಾಕ್ಟಿಕಲ್ ಆಗಿ ಜನರು ತೊಂದರೆಪಡುತ್ತಾ ಇದ್ದಾರೆ. ಕೇಂದ್ರೀಯ ಸಹಕಾರ ಭೂಅಭಿವೃದ್ಧಿ ಬ್ಯಾಂಕು ಈವರೆಗೆ 33,800 ಬಾವಿಗಳನ್ನು ಕಟ್ಟಲು ದೀರ್ಘಾವಧಿ ಸಾಲವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರೈತರು ಒಂದು ಮತ್ತು ಎರಡು ಇನ್‌ಸ್ಟಾಲ್‌ಮೆಂಟುಗಳನ್ನು ತೆಗೆದುಕೊಳ್ಳುತ್ತಾರೆ. ಬಾವಿ ಪೂರ್ತಿ ಯಾಗಿರುವುದಿಲ್ಲ ಅದನ್ನು ಪೂರ್ತಿ ಮಾಡಲು ಬೇರೆ ಕಡೆ ಸಾಲ ಸಿಕ್ಕುವುದಿಲ್ಲ. ಇಷ್ಟರಲ್ಲಿ ಬ್ಯಾಂಕಿನಿಂದ ಹಣ ಕಟ್ಟಿ ಎಂದು ನೋಟೀಸ್ ಕೊಡುತ್ತಾರೆ. ಪುನಃ ಬಾವಿ ತೆಗೆಯಲು ಹಣ ಸಿಕ್ಕುವುದಿಲ್ಲ. ಫೈನಲ್ ಬಿಲ್ ಆಗದೆ ಇದ್ದರೆ, ರೈತನ ಗತಿ ಏನಾಗುತ್ತದೆ ? ಸರ್ಕಾರ ಏನು ಸಹಾಯ ಮಾಡಿದಂತಾಗುತ್ತದೆ? ಅವನು ಇದರಿಂದ ಕಷ್ಟಕ್ಕೆ ಸಿಕ್ಕಿದಂತಾಗುವುದಿಲ್ಲವೇ ? ಮೊದಲು ಅವನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿ. ಆವನಿಗೆ ಕೊಟ್ಟ ಸಾಲವನ್ನು ಬಿಟ್ಟುಬಿಡಿ ಎಂದು ಹೇಳುವುದಿಲ್ಲ. ಆದಷ್ಟುಮಟ್ಟಿಗೆ ಅವನಿಗೆ ರಿಯಾಯಿತಿ ತೋರಿಸಿ. ಇದರ ಬಗ್ಗೆ ಶ್ರೀಮಾನ್ ವೆಂಕಟಗಿರಿಯಪ್ಪನವರು ಹೇಳಿದರು. ಸೆಂಟ್ರಲ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಶೇಕಡ 90 ಭಾಗ ಕೊಟ್ಟಿದ್ದಾರೆ. ಆದರೆ ಪ್ರೈಮರಿ ಮಾರ್ಟ್‌ಗೇಜ್ ಬ್ಯಾಂಕ್‌ನವರು ಏನೂ ಕೊಡುತ್ತಾ ಇಲ್ಲ. ಅವನು ಆವರಿಗೆ ಒಂದಕ್ಕೆ ಎರಡರಷ್ಟು ಜಮೀನನ್ನು ಆಧಾರ ಮಾಡುತ್ತಾನೆ. ಆದರೂ ಒಂದು ಕಂತು ಕಟ್ಟದೇ ಹೋದರೆ ನೋಟೀಸ್ ಕೊಡುತ್ತಾರೆ. ಆರೀತಿ ಮಾಡಿ ಅವನನ್ನು ಕಷ್ಟಕ್ಕೆ ಸಿಕ್ಕಿಸಬೇಡಿ. ಅವನಿಗೆ ರಿಯಾಯಿತಿ ತೋರಿಸಿ. ಈಗ ನೀವು ಶೇಕಡ 90 ಪರ್ಸೆಂಟು ಸಾಲವನ್ನು ವಸೂಲ್ಮಾಡಬೇಕೆಂದು ಏನು ಒಂದು ರೂಲ್ ಮಾಡಿದ್ದಾರೋ ಅದನ್ನು 50 ಪರ್ಸೆಂಟಿಗೆ ಇಳಿಸಿ ಜನಗಳಿಗೆ ಸಾಲ ಸಿಕ್ಕುವ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಕೋಅಪರೇಷನ್ ಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪರಿಹಾರ ಕಾಮಗಾರಿಗಳ ವಿಷಯ. ನಮ್ಮ ಕಡೆ ಈಗಾಗಲೇ ಅದನ್ನು ನಿಲ್ಲಿಸಿ ಬಿಟ್ಟಿದ್ದೀರಿ. ತುಮಕೂರು ಜಿಲ್ಲೆಯಲ್ಲಿ 4 ದಿವಸ ಮಾತ್ರ 11, 12 ಇಂಚು ಮಳೆಯಾಯಿತು. ಜಮೀನು ಸ್ವಲ್ಪ ತೇವ ಆಗಿದೆ ಎಂದು ನಿಲ್ಲಿಸಿಬಿಟ್ಟಿದ್ದೀರಿ ಶಾಶ್ವತವಾದ ಖಾಯಂಪರಿಹಾರ ಕಾರ್ಯ ಭಾಗವಾಗಿ 64 ಫ್ಯಾಮಿನ್ ಹೆಡ್‌ನಲ್ಲಿ ಬಾವಿಗಳನ್ನು ತೆಗೆಸಬೇಕೆಂದು ಸರ್ಕಾರ ನಿಗದಿ ಮಾಡಿದೆ. ಅದಕ್ಕಾಗಿ ಸಾವಿರಾರು ಅರ್ಜಿಗಳೂ ಬಂದಿವೆ. ಈಗ ಬಾವಿಗಳನ್ನು ತೆಗೆಸುವುದಕ್ಕಾಗುವುದಿಲ್ಲ ಎಂದು ಎತಕ್ಕೆ ಹೇಳಿದಿರಿ ? ಬಾವಿಯಲ್ಲಿ ನೀರು ಬರವೇ ಇದ್ದರೆ ಸಾಲ ಕೊಟ್ಟಿದ್ದನ್ನು ಬಿಟ್ಟು ಬಿಡುತ್ತೀರಾ ? ಇನ್ನೊಂದು ವಿಷಯ ಏನೆಂದರೆ ಮಾಗಡಿ ಪಾಳ್ಯದ ಸೊಸೈಟಿಗೆ ಆಡಿಟರ್ ಹೋಗಿ ಅಲ್ಲಿರುವ ಪುಸ್ತಕಗಳನ್ನು ತಂದಿದ್ದಾರೆ. ಅವರಿಗೆ ಏನೂ ತೊಂದರೆಯಾಗದಂತೆ ನೋಡಿ ಕೊಳ್ಳಬೇಕೆಂದು ಹೇಳಿ, ನನಗೆ ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಸಿ. ಬೋರಯ್ಯ.—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಅವಿಶ್ವಾಸ ಠರಾವಿನ ಮೇಲೆ ಜವಾಬು ಕೊಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ಜವಾಬು ಕೊಡತಕ್ಕಂಥ ಕಾಲದಲ್ಲಿ ಜವಾಬು ಕೊಡುತ್ತಾರೆಂದು ಅರಿಕೆ ಮಾಡಿಕೊಂಡಿದ್ದು ಈ ಸಭೆಗೆ ಗೊತ್ತಿರಬಹುದು ಎಂದು ಅಂದುಕೊಂಡಿದ್ದೇನೆ.

ಮಾನ್ಯ ಸದಸ್ಯರಾದಂಥ ನಂಜೇಗೌಡರು ಎಂ. ಎಸ್. ಆರ್. ಟಿ. ಸಿ. ಮೇಲೂ ಮತ್ತು ಮಂತ್ರಿಗಳ ಮೇಲೂ ಕೆಲವು ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೆ.

## Point of order whether a Minister can reply to points raised in connection with No-confidence Motion already disposed of while replying to debate on Motion of Thanks.

SRI K. H. RANGANATH (Mudigere).—I rise to a point of order, Sir The Hon. Deputy Minister while opening his speech, he was pleased to say that he is now replying to the remarks made during the debate on the motion of no-confidence. He prefaced his speech by saying to that effect. In fact, the reply to the Motion of Thanks can only be given by